MAA ಫ್ರೆಂಡ್ಸ್ ಸಾರಥ್ಯದಲ್ಲಿ...

# ಯುವ ಮಾರ್ಗ

YUVA MARGA NEWS PAPER
VOICE OF THE NATION

ಕನ್ನಡ ದಿನಪತ್ರಿಕೆ "ಇದು ರಾಷ್ಟ್ರದ ಧ್ವನಿ"

ಸಂಪಾದಕರು : ಅನಿಲ ಕುಮಾರ್ ಹೆಚ್
Cell : 9743497111

YUVA MARGA KANNADA DAILY NEWS PAPER

ಪ್ರಧಾನ ಸಂಪಾದಕರು : ಮನೋಜ ಮಿಶ್ರಾ
Cell : 9743496111

ಸಂಪುಟ: 04 | ಸಂಚಿಕೆ: 245 | ಭಾನುವಾರ : 13-07-2025 | ರಾಯಚೂರು | RNI NO: KARKAN/2022/90446 | ಪುಟ: 4 | ಬೆಲೆ: ರೂ: 2-00

VOLUME: 04 | ISSUE: 245 | SUNDAY : 13-07-2025 | RAICHUR | EMAIL: YUVAMARGA@GMAIL.COM | PAGE: 4 | PRICE: Rs: 2-00

# ದಸರಾ ರಜೆಯಲ್ಲಿ ಜಾತಿ ಗಣತಿ ಸಮೀಕ್ಷೆ

**ಬೆಂಗಳೂರು,ಜು.12–** ರಾಜ್ಯದಲ್ಲಿ ಹೊಸದಾಗಿ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ-ಜಾತಿ ಜನಗಣತಿಯನ್ನು ನಡೆಸಲು ರಾಜ್ಯ ಸರ್ಕಾರ ನಿರ್ಧರಿಸಿರುವ ಹಿನ್ನೆಲೆಯಲ್ಲಿ ಮುಂಬರುವ ದಸರಾ ರಜಾದಿನಗಳಲ್ಲಿ ಗಣತಿ ನಡೆಸಲು ಕರ್ನಾಟಕ ಹಿಂದುಳಿದ ವರ್ಗಗಳ ಆಯೋಗ ಮುಂದಾಗಿದೆ.ಜಾತಿಗಣತಿಗೆ ಶಾಲಾ ಶಿಕ್ಷಕರನ್ನು ಬಳಕೆ ಮಾಡಿಕೊಳ್ಳಲಿರುವ ಹಿನ್ನೆಲೆಯಲ್ಲಿ ದಸರಾ ರಜೆಯಲ್ಲಿ ಅವರ ಕರ್ತವ್ಯವನ್ನು ಬಳಸಿಕೊಳ್ಳಲು ಹಿಂದುಳಿದ ಆಯೋಗ ನಿರ್ಧರಿಸಿದೆ ಎಂದು ಹೇಳಲಾಗಿದೆ.ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್ ಆರ್.ನಾಯಕ್ ಈ ಕುರಿತು ಮಾಹಿತಿ ನೀಡಿದ್ದು ಗಣತಿಗೆ ಶಿಕ್ಷಕರು ಮೊದಲ ಆಯ್ಕೆಯಾಗಿರುವ ಹಿನ್ನೆಲೆಯಲ್ಲಿ ರಜೆ ದಿನಗಳಲ್ಲಿ ಶಿಕ್ಷಕರನ್ನು ಬಳಸಿಕೊಳ್ಳಲಿದೆ, ಹೀಗಾಗಿಯೇ ದಸರಾ ರಜೆಯಲ್ಲಿ ಅವರ ಸೇವೆ ಬಳಸಿಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.ಸಮೀಕ್ಷೆಗಳಿಗೆ ಸರ್ಕಾರಿ ಮತ್ತು ಅನುದಾನಿತ ಶಿಕ್ಷಕರನ್ನು ಬಳಸಿಕೊಳ್ಳುವುದು ಬಹು ಹಿಂದಿನಿಂದ ನಡೆದುಕೊಂಡ ಬಂದ ಪರಿಪಾಠ. ಈ ಹಿನ್ನೆಲೆಯಲ್ಲಿ 15 ದಿನಗಳ ದಸರಾ ರಜೆಯನ್ನು ಇನ್ನೂ 10 ದಿನಗಳವರೆಗೆ ಸಾಧ್ಯತೆಯೊಂದಿಗೆ ಸಮೀಕ್ಷೆ ನಡೆಸಲು ನಿರ್ಧರಿಸಲಾಗಿದೆ ಎಂದಿದ್ದಾರೆ.ಹಿಂದುಳಿದ ವರ್ಗದ ಪ್ರಸ್ತಾವನೆಯನ್ನು ಶೀಘ್ರದಲ್ಲೇ ರಾಜ್ಯ ಸರ್ಕಾರಕ್ಕೆ ಕಳುಹಿಸಿ ಅಲ್ಲಿಂದ ಒಪ್ಪಿಗೆ ದೊರೆತ ನಂತರ ಮುಂದಿನ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಅವರು ಮಾಹಿತಿ ಹಂಚಿಕೊಂಡಿದ್ದಾರೆ.ದಸರಾ ಹೊತ್ತಿಗೆ ಹಿಂದುಳಿದ ಆಯೋಗ ಅಸ್ತಿತ್ವದಲ್ಲಿರುವ ಪ್ರಶ್ನಾವಳಿಯಲ್ಲಿ ಬದಲಾವಣೆ ಮಾಡುವುದೂ ಸೇರಿದಂತೆ ತನ್ನ ಪ್ರಾಥಮಿಕ ಕೆಲಸ ಪೂರ್ಣಗೊಳಿಸುವ ನಿರೀಕ್ಷೆಯಿದೆ. ಸರ್ಕಾರಿ ಆದೇಶ ಹೊರಡಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಸಮೀಕ್ಷೆ ಪೂರ್ಣಗೊಳಿಸಲು ಸರ್ಕಾರ ಉದ್ದೇಶಿಸಿದೆ, ಆದರೆ ಆ ಆದೇಶ ಇನ್ನೂ ಹೊರಬಿದ್ದಿಲ್ಲ ಎಂದು ಸ್ಪಷ್ಟಪಡಿಸಿದರು.2015 ರ ಕಾಂತರಾಜ್ ಆಯೋಗದ ಸಮೀಕ್ಷೆ ಬದಿಗಿಟ್ಟ ನಂತರ ರಾಜ್ಯ ಸರ್ಕಾರ ಹೊಸ ಸಮೀಕ್ಷೆಗೆ ನಿರ್ಧರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಯಪ್ರಕಾಶ್ ಹೆಗ್ಡೆ ಆಯೋಗ ಸಲ್ಲಿಸಿದ ಅದರ ವರದಿಯನ್ನು ಇತ್ತೀಚೆಗೆ ತಿರಸ್ಕರಿಸಿ ಹೊಸದಾಗಿ ಸಮೀಕ್ಷೆ ನಡೆಸಲು ನಿರ್ಧರಿಸಿದ್ದಾರೆ.

ದಸರಾ ರಜೆ ವಿಸ್ತರಣೆ ಸಾಧ್ಯತೆ

ದಸರಾ ರಜೆಗೆ ರಾಜ್ಯದಲ್ಲಿ ಜಾತಿಗಣತಿ ನಡೆಸಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ದಸರಾ ರಜೆಯನ್ನು ವಿಸ್ತರಿಸುವ ಸಾಧ್ಯತೆಗಳಿವೆ ಎನ್ನಲಾಗಿದೆ.'ರಾಜ್ಯ ಸರ್ಕಾರ ದಸರಾ ರಜೆಯನ್ನು ವಿಸ್ತರಿಸುವ ಪ್ರಸ್ತಾಪ ಒಪ್ಪದಿದ್ದರೆ ಹಿಂದುಳಿದ ವರ್ಗಗಳ ಆಯೋಗ ಸಮೀಕ್ಷೆಯನ್ನು ಇತರ ಸಂಸ್ಥೆಗಳಿಗೆ ಹೊರಗುತ್ತಿಗೆ ನೀಡಬೇಕಾಗಬಹುದು ಅಥವಾ ಆಶಾ ಕಾರ್ಯಕರ್ತರು ಮತ್ತು ಬಿಲ್ ಕಲೆಕ್ಟರ್‌ಗಳನ್ನು ಒಳಗೊಳ್ಳಬಹುದು ಎನ್ನಲಾಗಿದೆ.ಕಳೆದ ತಿಂಗಳು ಶಾಲಾ ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ, ಸಮೀಕ್ಷೆಗೆ ಶಿಕ್ಷಕರನ್ನು ನಿಯೋಜಿಸುವುದರಿಂದ ಶೈಕ್ಷಣಿಕ ಸಮಯಕ್ಕೆ ತೊಂದರೆಯಾಗುತ್ತದೆ ಎಂಬ ಕಾರಣಕ್ಕೆ ಸರ್ಕಾರ ಸಮೀಕ್ಷೆ ಕಾರ್ಯವನ್ನು ಹೊರಗುತ್ತಿಗೆ ನೀಡಲು ಯೋಜಿಸುತ್ತಿದೆ ಎಂದು ಹೇಳಿದ್ದರು.ಆದಾಗ್ಯೂ, ಶಿಕ್ಷಕರ ಅನುಪಸ್ಥಿತಿ ಸಮೀಕ್ಷೆಯ ಸಮಗ್ರತೆ ಮತ್ತು ಪಾವಿತ್ರ್ಯಕ್ಕೆ ಧಕ್ಕೆ ತರುತ್ತದೆ ಎಂದು ಆಯೋಗ ಭಾವಿಸುತ್ತದೆ ಎಂದು ಹೇಳಲಾಗಿದೆ.

## ಬೆಂಗಳೂರು-ಹುಬ್ಬಳ್ಳಿ- ಸಿಂಧನೂರು ರೈಲಿಗೆ ಕೇಂದ್ರ ಸಚಿವ ವಿ.ಸೋಮಣ್ಣ ಚಾಲನೆ

ಯುವ ಮಾರ್ಗ ಸುದ್ದಿ




**ರಾಯಚೂರು,ಜು.12–** ಬೆಂಗಳೂರು, ಹುಬ್ಬಳ್ಳಿ ಎಕ್ಸ್‌ಪ್ರೆಸ್ (ಟ್ರೈನ್ ಸಂಖ್ಯೆ 17391/92) ರೈಲನ್ನು ಸಿಂಧನೂರವರೆಗೆ ರೈಲು ಸಂಚಾರಕ್ಕೆ ಕೇಂದ್ರ ರೈಲ್ವೇ ಖಾತೆ ಹಾಗೂ ಜಲಶಕ್ತಿ ರಾಜ್ಯ ಸಚಿವ ವಿ.ಸೋಮಣ್ಣ ಅವರು ಶನಿವಾರ ಜಿಲ್ಲೆಯ ಸಿಂಧನೂರಿನ ರೈಲು ನಿಲ್ದಾಣದಲ್ಲಿ ಚಾಲನೆ ನೀಡಿದರು.

ಈ ವೇಳೆ ಸಚಿವರಾದ ವಿ.ಸೋಮಣ್ಣ ಅ ವರು ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರು 3 ನೇ ಭಾರಿಗೆ ದೇಶದ ಪ್ರಧಾನಿಗಳಾದ ನಂತರ ರೈಲ್ವೆ ಇಲಾಖೆಯಲ್ಲಿ ಹಲವು ಕ್ರಾಂತಿಕಾರಕ ಕೆಲಸ ಮಾಡಿದ್ದಾರೆ. ಅದರ ಭಾಗವಾಗಿ ಹಲವು ವರ್ಷಗಳ ಕನಸಿನ ರೈಲು ಸಂಚಾರಕ್ಕೆ ಇಂದು ಚಾಲನೆ ನೀಡಲಾಗಿದೆ ಎಂದರು.

ಜನತೆಗೆ ಉತ್ತಮ ಸಂಪರ್ಕ ಸೌಲಭ್ಯ ನೀಡುವ ಉದ್ದೇಶದಿಂದ ರೈಲ್ವೆ ಇಲಾಖೆ ಸಿಂಧನೂರಿಗೆ ಹೊಸದಾಗಿ ವಿಶೇಷ ರೈಲು ಸೇವೆ ಪ್ರಾರಂಭಿಸಿದೆ. ಈಗಾಗಲೇ ಸಿಂಧನೂರಿನಿಂದ ಹುಬ್ಬಳ್ಳಿ ಕಡೆಗೆ ಪ್ರತಿದಿನ ಸಂಚರಿಸುತ್ತಿರುವ ಪ್ಯಾಸೆಂಜರ್ ರೈಲು (ಸಂಖ್ಯೆ 56927/56928) ಜನರಿಂದ ಉತ್ತಮ ಪ್ರತಿಕ್ರಿಯೆ ದೊರೆತ್ತಿದೆ. ಅತಿ ಹೆಚ್ಚಿನ ಪ್ರಮಾಣದಲ್ಲಿ ಜನರು ರೈಲು ಸೇವೆಯಿಂದ ಸಂತುಷ್ಟರಾಗಿದ್ದಾರೆ ಈಗ ಹೊಸದಾಗಿ ಹುಬ್ಬಳ್ಳಿ ಬೆಂಗಳೂರು ಎಕ್ಸ್‌ಪ್ರೆಸ್ ರೈಲು (ಸಂಖ್ಯೆ 17391/17392) ಸೇವೆಯನ್ನು ಸಿಂಧನೂರಿನವರೆಗೆ ವಿಸ್ತರಿಸಿ ಈ ಭಾಗದ ಜನರ ನಿರೀಕ್ಷೆಯನ್ನು ಪೂರೈಸಲಾಗಿದೆ ಎಂದರು.

ಈ ರೈಲು ಪ್ರತಿ ದಿನ ಮಧ್ಯಾಹ್ನ 1.30 ಗಂಟೆಗೆ ಸಿಂಧನೂರಿನಿಂದ ಹೊರಡಲಿದೆ. ನಂತರ ಗದಗ, ಅಣ್ಣಿಗೇರಿ, ಶಿಶ್ವಿನಹಳ್ಳಿ ಮೂಲಕ ಸಂಜೆ 6 ಗಂಟೆಗೆ ಹುಬ್ಬಳ್ಳಿಗೆ ಆಗಮಿಸುತ್ತದೆ. ಅಲ್ಲಿಂದ 6.45 ಗಂಟೆಗೆ ಹೊರಟು, ರಾತ್ರಿ 3.55 ಕ್ಕೆ ಬೆಂಗಳೂರಿಗೆ ತಲುಪಲಿದೆ. ಅಲ್ಲದೆ ಪ್ರತಿ ದಿನ ಬೆಂಗಳೂರಿನಿಂದ ರಾತ್ರಿ 12.15ಕ್ಕೆ ಹೊರಡುವ ರೈಲು (ಸಂಖ್ಯೆ 17391) ಬೆಳಗ್ಗೆ 9ಕ್ಕೆ ಹುಬ್ಬಳ್ಳಿಗೆ ತಲುಪುತ್ತದೆ, ಮಧ್ಯಾಹ್ನ 2.30 ಕ್ಕೆ ಸಿಂಧನೂರಿಗೆ ನಿಲ್ದಾಣವನ್ನು ತಲುಪಲಿದೆ.

*2ನೇ ಪುಟಕ್ಕೆ*

## ಲೋಕ ಅದಾಲತ್ : 2199 ಬಾಕಿ ಪ್ರಕರಣಗಳು ಇತ್ಯರ್ಥ

ಯುವ ಮಾರ್ಗ ಸುದ್ದಿ



**ಲಿಂಗಸುಗೂರು,ಜು.12–** ಪಟ್ಟಣದ ನ್ಯಾಯಾಲಯದಲ್ಲಿ ಶನಿವಾರ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಬಾಕಿ ಇದ್ದ 2199 ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಯಿತು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ರಾಯಚೂರು, ತಾಲೂಕು ಕಾನೂನು ಸೇವಾ ಸಮಿತಿ ಲಿಂಗಸುಗೂರು ವತಿಯಿಂದ ಆಯೋಜಿಸಿದ್ದ ಲೋಕ ಅದಾಲತ್‌ನಲ್ಲಿ 1925 ವ್ಯಾಜ್ಯ ಪೂರ್ವ ಪ್ರಕರಣಗಳಲ್ಲಿ 44 ಪ್ರಕರಣಗಳು ಇತ್ಯರ್ಥಗೊಂಡವು. ಇತ್ಯರ್ಥಗೊಂಡ ಪ್ರಕರಣಗಳ ಮೊತ್ತ ರೂ.45,69,207 ಆಗಿದೆ. ಇತ್ಯರ್ಥಗೊಂಡ ಒಟ್ಟು ಪ್ರಕರಣಗಳ ಮೊತ್ತ 3,06,94,658 ರೂಪಾಯಿ ಆಗಿದೆ. ಈ ಸಂದರ್ಭದಲ್ಲಿ ಹಿರಿಯ ಶ್ರೇಣಿ ನ್ಯಾಯಾಧೀಶೆ ಉಂಡಿ ಮಂಜುಳಾ ಶಿವಪ್ಪ, ಪ್ರಧಾನ ಸಿವಿಲ್ ನ್ಯಾಯಾಧೀಶ ಅಂಬಣ್ಣ ಕೆ., ವಕೀಲರ ಸಂಘದ ಅಧ್ಯಕ್ಷ ಭೂಪನಗೌಡ ಕರಡಕಲ್, ವಕೀಲರಾದ ಮಹಾಲಿಂಗಪ್ಪ, ವಿಶ್ವನಾಥ ಪಾಟೀಲ್, ಹಾಜಿಬಾಬು, ಶರಣಬಸವ, ಉಪೇಂದ್ರ, ಅಮರೇಶ, ಆಂಜನೇಯ, ಜಾಕೀರ ಹುಸೇನ್, ಅರುಣಕುಮಾರ, ಸಿಬ್ಬಂಧಿಗಳಾದ ವೆಂಕೋಬ, ಅಶೋಕ ಪಟ್ಟಣಶೆಟ್ಟಿ ಬಸಯ್ಯ, ಹನುಮಂತ ಸೇರಿದಂತೆ ಇದ್ದರು.

## ಕಾತರಕಿ ಗ್ರಾಮದಲ್ಲಿ ಗೋಡೆ ಕುಸಿದು ಮಹಿಳೆ ಸಾವು

ಯುವ ಮಾರ್ಗ ಸುದ್ದಿ



**ಮಾನ್ವಿ,ಜು.12–** ತಾಲೂಕಿನ ಕಾತರಕಿ ಗ್ರಾಮದಲ್ಲಿ ಶುಕ್ರವಾರ ಗೋಡೆ ಕುಸಿದು ತಾಯಮ್ಮ ರಮೇಶ ವ.38 ಎನ್ನುವ ಮಹಿಳೆ ಮೃತಪಟ್ಟಿದ್ದು .ಸುಮಿತ್ರ ವ. 16 ಎನ್ನುವವರ ಕಾಲಿಗೆ ಪೆಟ್ಟಾಗಿದ್ದು ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಳೆದ ಕೇಲವು ದಿನಗಳಿಂದ ಸುರಿಯುತ್ತಿರುವ ಮಳೆಗೆ ಕಾತರಕಿ ಗ್ರಾಮದ ತಾಯಮ್ಮ ರಮೇಶ ರವರ ಹಳೆ ಮನೆಯ ಗೋಡೆಗಳಿಗೆ ಹಾನಿಯಾಗಿದ್ದು ಶುಕ್ರವಾರ ತಡ ರಾತ್ರಿ ಮನೆಯಲ್ಲಿ ತಾಯಮ್ಮ ಹಾಗೂ ಸಂಬಂದಿಕರಾದ ಸುಮಿತ್ರ ಮನೆಯಲ್ಲಿ ಮಲಗಿರುವ ಸಮಯದಲ್ಲಿ ದಿಡಿರ ಗೋಡೆ ಕುಸಿದಿದ್ದರಿಂದ ಸ್ಥಳದಲ್ಲಿಯೇ ತಾಯಮ್ಮ ಮೃತಪಟ್ಟಿದ್ದು ಅದೃಷ್ಟವಶತ್ ಸುಮಿತ್ರ ಸಣ್ಣ ಪುಟ್ಟ ಗಾಯಗಳೊಂದಿಗೆ ತಪ್ಪಿಸಿಕೊಂಡಿದ್ದಾರೆ. ಕುಟುಂಬಸ್ಥರು ಹಾಗೂ ಗ್ರಾಮಸ್ಥಾರು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆ ಶಾಸಕ ಹಂಪಯ್ಯನಾಯಕ ರವರು ತಾಲೂಕು ಸರ್ಕಾರಿ ಸಾರ್ವಜನಿಕರ ಆಸ್ಪತ್ರೆಗೆ ಭೇಟಿ ನೀಡಿ ಮೃತರ ಸಂಬಂದಿಗಳಿಗೆ ಸಾಂತ್ವನ ಹೇಳಿ ನಂತರ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತಿರುವ

*2ನೇ ಪುಟಕ್ಕೆ*

## ಫೋಟೊ ತೆಗೆಯುವ ನೆಪದಲ್ಲಿ ಪತಿಯನ್ನು ನದಿಗೆ ತಳ್ಳಿದ ಪತ್ನಿ



**ರಾಯಚೂರು,ಜು.12–** ಮಹಿಳೆಯೊಬ್ಬಳು ಪತಿಯನ್ನೆ ನದಿಗೆ ತಳ್ಳಿದ ಘಟನೆ ರಾಯಚೂರಿನಲ್ಲಿ ನಡೆದಿದೆ. ಪತಿಯನ್ನು ಪುಸಲಾಯಿಸಿಕೊಂಡು ರಾಯಚೂರು ತಾಲ್ಲೂಕಿನ ಗುರ್ಜಾಪುರ ಬ್ರಿಡ್ಜ್ ಕಂ ಬ್ಯಾರೇಜ್‌ಗೆ ಕರೆದುಕೊಂಡು ಬಂದ ಮಹಿಳೆ ಫೋಟೊಶೂಟ್ ಮಾಡಿದ್ದಾರೆ. ಬ್ರಿಡ್ಜ್ ಮೇಲೆ ನಿಂತು ಮೊದಲು ತಾನು ಫೋಟೊ ತೆಗೆಸಿಕೊಂಡಿದ್ದ ಪತ್ನಿ ನಂತರ ಪತಿಯನ್ನು ಬ್ರಿಡ್ಜ್ ತುದಿಗೆ ಹೋಗಿ ನಿಲ್ಲಲು ಹೇಳಿದ್ದಾರೆ. ಇದೇ ವೇಳೆ ಬ್ರಿಡ್ಜ್ ನ ತುದಿಯಲ್ಲಿದ್ದ ಪತಿಯನ್ನು ಕೆಳಕ್ಕೆ ತಳ್ಳಿದ್ದಾರೆ.

ಕೃಷ್ಣಾ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿದ್ದರಿಂದ ಆ ವ್ಯಕ್ತಿ ಸ್ವಲ್ಪ ದೂರ ಕೊಚ್ಚಿಕೊಂಡು ಹೋಗಿದ್ದಾರೆ. ಈಜು ಚೆನ್ನಾಗಿ ಬರುತ್ತಿದ್ದುದ್ದರಿಂದ ಈಜಿಕೊಂಡು ಹೋಗಿ ನದಿಭಾಗದ ಬಂಡೆಯೊಂದರ ಮೇಲೆ ಕುಳಿತು ಬಚಾವಾಗಿದ್ದಾರೆ.

*2ನೇ ಪುಟಕ್ಕೆ*

## ಶಿಕ್ಷಣ ವ್ಯಕ್ತಿತ್ವ ರೂಪಿಸುವ ಪ್ರಬಲ ಸಾಧನ- ಸಂಗಯ್ಯ ಸ್ವಾಮಿ ಕಲ್ಮಠ

ಯುವ ಮಾರ್ಗ ಸುದ್ದಿ



**ಮಾನ್ವಿ,ಜು.12–** ಶಿಕ್ಷಣ ಎನ್ನುವುದು ವ್ಯಕ್ತಿತ್ವ ರೂಪಿಸುವ ಅತ್ಯಂತ ಪ್ರಬಲವಾದ ಸಾಧನವಾಗಿರುವುದರಿಂದ ಎಲ್ಲ ತಾಯಂದಿರು ತಮ್ಮ ಮಕ್ಕಳಿಗೆ ಶಿಕ್ಷಣ ನೀಡಿ ಅವರ ಭವಿಷ್ಯವನ್ನು ಉಜ್ವಲಗೊಳಿಸಿರಿ. ಎಂದು ಕಲ್ಮಠ ವಿದ್ಯಾ ಸಂಸ್ಥೆಯ ಆಡಳಿತ ಅಧಿಕಾರಿ ಸಂಗಯ್ಯ ಸ್ವಾಮಿ ಕಲ್ಮಠ ಹೇಳಿದರು.

ಅವರು ಶನಿವಾರ ಮಾನವಿ ಪಟ್ಟಣದ ಶ್ರೀ ಪಂಪಾ ವಿರೂಪಾಕ್ಷೇಶ್ವರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆ ಕಲ್ಮಠ ಶಾಲೆಯಲ್ಲಿ ಆಯೋಜಿಸಿದ್ದ "ತಾಯಂದಿರ ಸಭೆ"ಯನ್ನು ಉದ್ಘಾಟಿಸಿ ಮಾತನಾಡಿದರು.

ಪಾಲಕರು ಮಕ್ಕಳಿಗೆ ಬೆಳಗಿನ ಜಾವ ಎಬ್ಬಿಸಿ ಅಭ್ಯಾಸದಲ್ಲಿ ತೊಡಗುವಂತೆ ಮಾಡಬೇಕು. ಮಕ್ಕಳಲ್ಲಿ ವಿದ್ಯೆಯ ಜೊತೆಗೆ ಸಂಸ್ಕಾರ ಕಲಿಸಿರಿ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಲ್ಮಠ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಮಂಜುನಾಥ ಕಮತರ ಅವರು ಮಾತನಾಡಿ "ತಾಯಿಯೇ ಮೊದಲ ಗುರು" "ಮನೆಯೇ ಮೊದಲ ಪಾಠಶಾಲೆ" ಮಕ್ಕಳು ಶಾಲೆಯಲ್ಲಿ ರುವುದಕ್ಕಿಂತ ಮನೆಯಲ್ಲಿ ಹೆಚ್ಚು ಕಾಲ ಕಳೆಯುತ್ತಾರೆ. ತಾವು ಮಕ್ಕಳಿಗೆ ಮನೆಯಲ್ಲಿ ಓದುವ ವಾತಾವರಣ ಸೃಷ್ಟಿಸಿರಿ. ಮಕ್ಕಳಿಗೆ ಮೊಬೈಲ್ ಕೊಡಬಾರದು ಮಕ್ಕಳಿಗೆ ಪುಸ್ತಕ ಓದುವ ಹವ್ಯಾಸ ಬೆಳೆಸಿರಿ ಎಂದರು.

ಕಾರ್ಯಕ್ರಮದಲ್ಲಿ ಕಲ್ಮಠ ಪ್ರೌಢಶಾಲೆಯ ಮುಖ್ಯಗುರುಗಳಾದ ಪ್ರಭಯ್ಯ ಸ್ವಾಮಿ, ದೈಹಿಕ ಶಿಕ್ಷಕರಾದ ಕೇಮ್ಯಾ ನಾಯ್ಕ್, ಹಿರಿಯ ಶಿಕ್ಷಕಿ ಜಯಶ್ರೀ, ಶಾಲಾ ಸಂಸತ್ ಉಪ ಮುಖ್ಯಮಂತ್ರಿಗಳಾದ ಗಣೇಶ ಮತ್ತು ಕಾವೇರಿ ಏಳನೇ ತರಗತಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಶಿಕ್ಷಕರಾದ ರವಿ ಹುಲಿಯಾಪುರ್ ಕಾರ್ಯಕ್ರಮ ನಿರೂಪಿಸಿದರು. ಶಿಕ್ಷಕಿ ರೂಪ ಸ್ವಾಗತಿಸಿದರು ಶಿಕ್ಷಕಿ ಮಹಾಂತಮ್ಮ ವಂದಿಸಿದರು, ಶಿಕ್ಷಕಿ ಸೌಮ್ಯ ಹಿರೇಮಠ ,ಗೀತಾ.ಪಿ ಪಾಲಕರಾದ ಖಾಜಬಾನು, ಈರಮ್ಮ ,ನೀಲಮ್ಮ ,ಶ್ವೇತಾ ಸರಸ್ವತಿ, ಶಬಾನ, ಗಂಗಮ್ಮ, ಇತರ ತಾಯಂದಿರು ಉಪಸ್ಥಿತರಿದ್ದರು.

## ನಿವೃತ್ತ ನೌಕರರ ಪಿಂಚಣಿ ಪರಿಷ್ಕರಿಸಿ, ಹಳೆಯ ಯೋಜನೆ ಮುಂದುವರೆಸಿ




ಯುವ ಮಾರ್ಗ ಸುದ್ದಿ

**ಲಿಂಗಸುಗೂರು,ಜು.12–** ನಿವೃತ್ತ ನೌಕರರ ತುಟ್ಟಿ ಭತ್ಯೆಯನ್ನು ಮಂಜೂರು ಮಾಡುವ ಜೊತೆಗೆ ಪಿಂಚಣಿ ಯೋಜನೆಯನ್ನು ಪರಿಷ್ಕರಣೆ ಮಾಡಬೇಕು. ಹಳೆಯ ಪಿಂಚಣಿ ಯೋಜನೆಯನ್ನು ಮುಂದುವರೆಸಬೇಕು ಎಂದು ನಿವೃತ್ತ ಸರಕಾರಿ ನೌಕರರ ಸಂಘದ ಪದಾಧಿಕಾರಿಗಳು ಸಹಾಯಕ ಆಯುಕ್ತರ ಮೂಲಕ ಪ್ರಧಾನಮಂತ್ರಿಗೆ ಮನವಿ ಸಲ್ಲಿಸಿ ಒತ್ತಾಯಿಸಿದರು.

ಪಿಂಚಣಿಯಲ್ಲಿ ಅನ್ಯಾಯವಾಗುತ್ತಿದ್ದು, ತುಟ್ಟಿ ಭತ್ಯೆ ಮಂಜೂರು ಮಾಡಬೇಕೆಂದು ಕೇಂದ್ರ ಸರಕಾರದಿಂದ 2004ರಲ್ಲಿ ಹೊಸ ಪಿಂಚಣಿ ಯೋಜನೆ ಜಾರಿಗೆ ತರಲಾಯಿತು. ದೇಶದ ಎಲ್ಲಾ ರಾಜ್ಯಗಳೂ ಕೇಂದ್ರದ ಮಾದರಿಯಲ್ಲಿ ಹೊಸತಾಗಿ ಸರಕಾರಿ ಸೇವೆಗೆ ನೇಮಕಗೊಳ್ಳುವ ನೌಕರರಿಗೆ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದವು. ಪರಿಣಾಮ ಸರಕಾರಿ ನೌಕರರು ನಿವೃತ್ತಿ ಬಳಿಕ ಆರ್ಥಿಕ ಸವಲತ್ತುಗಳಿಂದ ವಂಚಿತರಾಗುತ್ತಾರೆ. ಆದ್ದರಿಂದ ಹಳೆಯ ಪಿಂಚಣಿ ಯೋಜನೆಯನ್ನೇ ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಅಮರೇಶಪ್ಪ ಹೂನೂರು, ಉಪಾಧ್ಯಕ್ಷ ಹಾಜಿಮಲಂಗ ಬಾಬಾ, ಹನುಮಂತಪ್ಪ ಮೇಟಿ, ಶರಣಬಸವ, ಶರಣಬಸವರಾಜ್, ಅಮರಪ್ಪ ಜೀರಾಳ, ಸುರೇಶ ಕುಲಕರ್ಣಿ ಸೇರಿದಂತೆ ಇದ್ದರು.

## ಮೊದಲನೇಯ ಪುಟದಿಂದ

# ಬೆಂಗಳೂರು-ಹುಬ್ಬಳ್ಳಿ- ಸಿಂಧನೂರು ರೈಲಿಗೆ ಕೇಂದ್ರ ಸಚಿವ ವಿ.ಸೋಮಣ್ಣ ಚಾಲನೆ

ಈ ಹೊಸ ರೈಲು ಸೇವೆಯು ಸಿಂಧನೂರು ಮತ್ತು ಸುತ್ತಮುತ್ತಲ ಪ್ರದೇಶಗಳಿಗೆ ಶ್ರೇಷ್ಠ ಸಂಚಾರ ಸಂಪರ್ಕವನ್ನು ಕಲ್ಪಿಸಿ, ಈ ಭಾಗದ ವಾಣಿಜ್ಯ ಚಟುವಟಿಕೆಗಳಿಗೆ ಬಲ ನೀಡಲಿದೆ ಅಲ್ಲದೆ ಕೈಗಾರಿಕಾ ವಿಸ್ತರಣೆಗೆ ಅನುಕೂಲವಾಗಲಿದೆ. ಶೈಕ್ಷಣಿಕ ಅಭ್ಯುದಯಕ್ಕೆ ಹಾಗೂ ಕೃಷಿಕರ ಉತ್ಪನ್ನಗಳನ್ನು ದೊಡ್ಡ ಮಾರುಕಟ್ಟೆಗೆ ತಲುಪಿಸಲು ಸಹಕಾರಿಯಾಗಲಿದೆ ಎಂದರು.

ಇದೇ ಸಂದರ್ಭದಲ್ಲಿ ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ,, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಶಿವರಾಜ ಎಸ್.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಬಸನಗೌಡ ಬಾದರ್ಲಿ, ಮಾಜಿ ಲೋಕಸಭಾ ಕ್ಷೇತ್ರದ ಸದಸ್ಯರಾದ ವಿರುಪಾಕ್ಷಪ್ಪ, ಮಾಜಿ ಸಚಿವ ನಾಡಗೌಡ ವೆಂಕಟರಾವ್, ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾದ ಬೇಲಾ ಮೀನಾ, ಪ್ರಧಾನ ವಾಣಿಜ್ಯ ವ್ಯವಸ್ಥಾಪಕರಾದ ಎಸ್ .ಪಿ .ಶಾಸ್ತ್ರೀ, ಮುಖ್ಯ ವಾಣಿಜ್ಯ ವ್ಯವಸ್ಥಾಪಕರಾದ ಡಾ .ಅನೂಪ ದಯಾನಂದ ಸಾಧು, ವಿಭಾಗೀಯ ರೈಲ್ವೆ ಹೆಚ್ಚುವರಿ ವ್ಯವಸ್ಥಾಪಕರಾದ ಟಿ.ವಿ.ಭೂಷಣ, ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು ಸಂತೋಷ ಹೆಗಡೆ , ಗತಿ ಶಕ್ತಿ ವಿಭಾಗದ ಯೋಜನಾ ವ್ಯವಸ್ಥಾಪಕ ಸಂಜಯ ಕುಮಾರ , ವಿಭಾಗೀಯ ಪ್ರಧಾನ ಕಾರ್ಯಾಚರಣೆ ವ್ಯವಸ್ಥಾಪಕರಾದ ಅರವಿಂದ ಹರ್ಲೆ, ವಿಭಾಗೀಯ ಸುರಕ್ಷಾ ಆಯುಕ್ತ ಅಲೋಕ ಕುಮಾರ ಸೇರಿದಂತೆ ಇತರರು ಇದ್ದರು.

# ಕಾತರಕಿ ಗ್ರಾಮದಲ್ಲಿ ಗೋಡೆ ಕುಸಿದು ಮಹಿಳೆ ಸಾವು

ಸುಮಿತ್ರರವರ ಆರೋಗ್ಯ ವಿಚಾರಿಸಿದರು. ನಂತರ ಮಾತನಾಡಿ ಗಾಯಗೊಂಡ ಯುವತಿಗೆ ಅಗತ್ಯ ಚಿಕಿತ್ಸೆಯನ್ನು ನೀಡಬೇಕು ಹಾಗೂ ಗೋಡೆ ಕುಸಿತದಿಂದ ಮೃತ ಪಟ್ಟ ತಾಯಮ್ಮ ಕುಟುಂಬದವರಿಗೆ ಸೂಕ್ತ ಪರಿಹಾರ ನೀಡುವಂತೆ ತಹಸೀಲ್ದಾರ್ ಭೀಮರಾಯ ರಾಮಸಮುದ್ರ ಹಾಗೂ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಡಾ.ಶರಣಪ್ಪ ರವರಿಗೆ ಸೂಚಿಸಿದರು.

ಈ ಕುರಿತು ಮಾನ್ವಿ ಪೊಲೀಸ್ ಠಾಣೆಯಲ್ಲಿ ಪ್ರಕರಣದಾಖಲಿಸಿಕೊಂಡು ಪಿ.ಐ. ಸೋಮಶೇಖರ ಎಸ್.ಕೆಂಚರೆಡ್ಡಿ ತನಿಖೆ ಕೈಗೊಂಡಿದ್ದಾರೆ

# ಡಿವೈಎಸ್ಪಿ ವಿಜಯಕ್ರಾಂತಿ ಕರ್ತವ್ಯದ ವರದಿ ಮಾಡಿಕೊಳ್ಳದಿದ್ದರೆ ಧರಣಿ



**ಕಲಬುರಗಿ,ಜು 12–** ಹಣ ನೀಡುವಂತೆ ಬೇಡಿಕೆ ಇಟ್ಟಿರುವ ಪರಿಣಾಮ ಪಿಎಸ್ಐ ಪರಶುರಾಮ ಆತ್ಮಹತ್ಯೆ ಪ್ರಕರಣ ಮಾಸುವ ಮುನ್ನವೇ ಯಾದಗಿರಿ ಡಿವೈಎಸ್ಪಿ ಹುದ್ದೆಗೆ ವರದಿ ಮಾಡಿಕೊಳ್ಳದಂತೆ ಅಡ್ಡಿಪಡಿಸಿರುವವರ ವಿರುದ್ಧ ಮಾಜಿ ಶಾಸಕ, ಬಿಜೆಪಿ ವಿಭಾಗೀಯ ಪ್ರಭಾರಿ ರಾಜಕುಮಾರ ಪಾಟೀಲ್ ತೇಲ್ಕೂರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಡಿವೈಎಸ್ಪಿ ಹುದ್ದೆಯ ತರಬೇತಿ ಪೂರ್ಣಗೊಳಿಸಿ ಯಾದಗಿರಿಯಲ್ಲಿ ಡಿವೈಎಸ್ಪಿ ಹುದ್ದೆಯ ಕಾರ್ಯಭಾರದ ಕರ್ತವ್ಯದ ವರದಿ ಮಾಡಿಕೊಳ್ಳದಿರುವಂತೆ ಒತ್ತಡ ಹಾಕಿರುವುದನ್ನು ಗಂಭೀರವಾಗಿ ಪರಿಗಣನೆಗೆ ತೆಗೆದುಕೊಂಡು ಮತ್ತೊಂದು ದುರಂತಕ್ಕೆ ಅವಕಾಶ ಮಾಡಿಕೊಡದೇ ತಕ್ಷಣವೇ ಕರ್ತವ್ಯ ಹಾಜರಾಗುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಮಾಜಿ ಶಾಸಕರು ಆಗ್ರಹಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಸಿದ್ಧರಾಮಯ್ಯ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ ಹಾಗೂ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ ಮೋಹನ್ ಅವರಿಗೆ ಪತ್ರ ಬರೆದಿರುವ ತೇಲ್ಕೂರ, ಜೇವರ್ಗಿ ತಾಲೂಕಿನ ವಿಜಯಕ್ರಾಂತಿ ಪ್ರತಿಭಾನ್ವಿತೆ. ಸ್ಪರ್ಧಾತ್ಮಕಾ ಪರೀಕ್ಷೆಯಲ್ಲಿ ಮೊದಲ ಪ್ರಯತ್ನದಲ್ಲೇ ನೇರವಾಗಿ ಡಿವೈಎಸ್ಪಿಯಾಗಿದ್ದಾರೆ. ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದರಿಂದ ತೆರವು ಇದ್ದ ಯಾದಗಿರಿ ಡಿವೈಎಸ್ಪಿ ಹುದ್ದೆಯ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳುವಂತೆ ಮಹಾನಿರ್ದೇಶಕರು ಕಳೆದ ಜೂನ್ 30ರಂದು ಆದೇಶ ಹೊರಡಿಸಿದ್ದಾರೆ. ಆದರೆ 10 ದಿನ ಕಳೆದರೂ ಕರ್ತವ್ಯಕ್ಕೆ ಹಾಜರಾಗಿ ವರದಿ ಮಾಡಿಕೊಳ್ಳಲಿಕ್ಕಾಗುತ್ತಿಲ್ಲ. ಯಾದಗಿರಿ ಶಾಸಕರು ಹಾಗೂ ಅವರ ಪುತ್ರ ಬೇಡಿಕೆಯನ್ನಿಟ್ಟು ಕರ್ತವ್ಯಕ್ಕೆ ಹಾಜರಾಗದಂತೆ ಅಡ್ಡಿಪಡಿಸಿದ್ದೇ ಇದಕ್ಕೆ ಕಾರಣ ಎನ್ನಲಾಗುತ್ತಿದೆ.

ತಮ್ಮ ಪ್ರತಿಭೆ ಮೂಲಕ ಹಗಲಿರಳು ಓದಿ ಹುದ್ದೆಯನ್ನು ಪಡೆದಿರುವಂತಹ ಪ್ರತಿಭಾನ್ವಿತರಿಗೆ ಇಲಾಖಾ ಸೇವೆಗೆ ಹಾಜರಾಗುವ ಪ್ರಾರಂಭದಲ್ಲೇ ಹಣದಂತಹ ಬೇಡಿಕೆ ಇಟ್ಟರೆ ಮನಸ್ಸಿನ ಎಂತಹ ಪರಿಣಾಮ ಬೀರುತ್ತದೆ ಎಂದು ಊಹಿಸಲಿಕ್ಕಾಗದು. ರಾಜ್ಯ ಸರ್ಕಾರದ ಆಡಳಿತ ವೈಖರಿಗೆ ಇದು ಹಿಡಿದ ಕನ್ನಡಿ ಎನ್ನಬಹುದು. ಆದ್ದರಿಂದ ಈಗಲಾದರೂ ತಾವು ಎಚ್ಚೆತ್ತು ವಿಜಯಕ್ರಾಂತಿ ಅವರು ತಕ್ಷಣವೇ ಯಾದಗಿರಿ ಡಿವೈಎಸ್ಪಿ ಹುದ್ದೆಗೆ ವರದಿ ಮಾಡಿಕೊಳ್ಳದಿದ್ದರೆ, ಅದರಲ್ಲೂ ಸೋಮವಾರದೊಳಗೆ ಕರ್ತವ್ಯಕ್ಕೆ ಹಾಜರಾಗದಿದ್ದರೆ ಪೊಲೀಸ್ ಮಹಾನಿರ್ದೇಶಕರ ಕಚೇರಿ ಎದುರು ಧರಣಿ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಅಧಿಕಾರಿಗಳ ಪ್ರಾಣ ಹಿಂಡುವ ಮಟ್ಟಿಗೆ ಭ್ರಷ್ಟಾಚಾರ ವ್ಯಾಪಕಗೊಂಡಿರುವುದು ನಿಜಕ್ಕೂ ಆತಂಕಕಾರಿ ಸಂಗತಿ ಎಂದಿದ್ದಾರೆ.

# ವಿದ್ಯಾರ್ಥಿ ಕಾಂಗ್ರೆಸ್ ಸಮಿತಿ ಚುನಾವಣೆ ಆರಂಭ




**ಬಳ್ಳಾರಿ,ಜು.12–** ಭಾರತ ರಾಷ್ಟ್ರೀಯ ವಿದ್ಯಾರ್ಥಿ ಒಕ್ಕೂಟ ( ಎನ್.ಎಸ್.ಯು.ಐ) ಬಳ್ಳಾರಿ ಜಿಲ್ಲಾ ಸಮಿತಿಗೆ ನೂತನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆಗೆ ಇಂದು ಜಿಲ್ಲಾ ಸಮಿತಿ ಕಚೇರಿಯಲ್ಲಿ ಜಿಲ್ಲಾ ಅಧ್ಯಕ್ಷ ಅಲ್ಲಂಪ್ರಶಾಂತ್ ಚಾಲನೆ ನೀಡಿದ್ದಾರೆ.

ರಾಜ್ಯ ಮಟ್ಟದಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಜಿಲ್ಲಾಧ್ಯಕ್ಷರ ಸ್ಥಾನಕ್ಕೆ ಆಯ್ಕೆ ಪ್ರಕ್ರಿಯೆ ನಡೆಯುತ್ತಿದ್ದು.

ಈ ಆಯ್ಕೆ ಪ್ರಕ್ರಿಯೆಯು ಜು.16 ರ ವರೆಗೆ ನಡೆಯಲಿದ್ದು ಆಸಕ್ತಿ ಇರುವ ಅಖಂಡ ಬಳ್ಳಾರಿ ಜಿಲ್ಲೆಯ ವಿದ್ಯಾರ್ಥಿಗಳು ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಭೇಟಿ ನೀಡಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

## ಬೆಳೆ ವಿಮೆಗೆ ಕೃಷಿ ಇಲಾಖೆಯಿಂದ ಅರಿವು ಮೂಡಿಸಿ:ಸಿದ್ರಾಮಯ್ಯಾ ಸ್ವಾಮಿ

**ಬೀದರ. ಜು.12–** ಜಿಲ್ಲೆಯ ರೈತರು ಹೆಚ್ಚಿನ ಪ್ರಮಾಣದಲ್ಲಿ ಬೆಳೆ ವಿಮೆಗೆ ನೋಂದಣಿ ಮಾಡಿಕೊಳ್ಳಲು ಕೃಷಿ ಇಲಾಖೆಯಿಂದ ಗ್ರಾಮ ಮಟ್ಟದಲ್ಲಿ ಅರಿವು ಮೂಡಿಸುವ ಕಾರ್ಯಕ್ರಮ ಮಾಡಬೇಕೆಂದು ಬೀದರ ಜಿಲ್ಲಾ ಕೃಷಿಕ ಸಮಾಜದ ಸಿದ್ರಾಮಯ್ಯಾ ಸ್ವಾಮಿ ತಿಳಿಸಿದರು. ಅವರು ಇತ್ತೀಚಿಗೆ ಜಂಟಿ ಕೃಷಿ ನಿರ್ದೇಶಕರ ಕಚೇರಿಯಲ್ಲಿ ನಡೆದ ಜಿಲ್ಲೆಯ ಕೃಷಿಕ ಸಮಾಜದ ಕಾರ್ಯಕಾರಿ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಕೃಷಿ ಇಲಾಖೆಯ ಎಲ್ಲಾ ಯೋಜನೆಗಳು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಅನುಷ್ಠಾನವಾಗಬೇಕು. ರೈತರು ಕೇವಲ ಸೋಯಾಅವರೆ ಬೆಳೆ ಬೆಳೆಯದೆ ಮಿಶ್ರಬೆಳೆ ಪದ್ದತಿ ಅಸನು ಸರಿಸಬೇಕೆಂದರು.

ಸಿರಿಧಾನ್ಯ ಬೆಳೆಯುವ ರೈತರಿಗೆ ಸರಕಾರದ ಸಹಾಯಧನ ಇರುವುದರಿಂದ ಹೆಚ್ಚಿನ ರೈತರು ಇದರ ಸದುಪಯೋಗ ಪಡೆಯಬೇಕು. ರೈತರು ಡಿ.ಎ.ಪಿ ಗೊಬ್ಬರಕ್ಕೆ ಪರ್ಯಾಯ ಸಂಯುಕ್ತ ಗೊಬ್ಬರ ಬಳಕೆ ಹಾಗೂ ಯೂರಿಯಾ ಗೊಬ್ಬರಕ್ಕೆ ಪರ್ಯಾಯವಾಗಿ ನ್ಯಾನೂ ಯುರಿಯಾ ಬಳಸುವುದು ಸೂಕ್ತ. ಈ ದಿಸೆಯಲ್ಲಿ ಕೃಷಿ ಇಲಾಖೆಯಿಂದ ಹಾಗೂ ತಾಲ್ಲೂಕು ಕೃಷಿಕ ಸಮಾಜದ ಘಟಕದಿಂದ ವ್ಯಾಪಕ ಪ್ರಚಾರ ಕೈಗೊಂಡು ರೈತರಿಗೆ ಸಂಯುಕ್ತ ಗೊಬ್ಬರ ಬಳಕೆ ಹಾಗೂ ನ್ಯಾನೂ ಯುರಿಯಾ ಬಳಸಲು ಪ್ರೋತ್ಸಾಹಿಸಬೇಕೆಂದರು. ಈ ಸಭೆಯಲ್ಲಿ ಬೀದರ ಜಂಟಿ ಕೃಷಿ ನಿರ್ದೇಶಕರಾದ ದೇವಿಕಾ ಆರ್, ಕೃಷಿ ಅಧಿಕಾರಿ ಕೈಲಾಸನಾಥ, ಜಿಲ್ಲಾ ಕೃಷಿಕ ಸಮಾಜದ ಉಪಾಧ್ಯಕ್ಷ ಉಮಾಕಾಂತ, ಖಜಾಂಚಿ ಗೋವಿಂದರೆಡ್ಡಿ, ಪ್ರಧಾನ ಕಾರ್ಯದರ್ಶಿ ಸಂಗಮೇಶ ವಾಲೆ, ರಾಜ್ಯ ಪ್ರತಿನಿಧಿ ಹಾಗೂ ಸದಸ್ಯರಾದ ವಿಶ್ವನಾಥ ಪಾಟೀಲ, ಜನವಾಡ ಕೃಷಿ ವಿಜ್ಞಾನ ಕೇಮದ್ರದ ಹಿರಿಯ ವಿಜ್ಞಾನಿ ಡಾ.ಉಮೇಶ, ಡಾ.ಭವಾನಿ, ಕ.ರಾ.ಸ.ಮಂ.ವ್ಯವಸ್ಥಾಪಕ ಮಲ್ಲಿಕಾರ್ಜುನ ಸೇರಿದಂತೆ ವಿವಿಧ ಅಧಿಕಾರಿಗಳು ಉಪ ಸ್ಥಿತರಿದ್ದರು.

# ರೋಟರಿ ಕ್ಲಬ್ ಅಫ್ ಗುಲ್ಬರ್ಗ ನಾರ್ತ್ ಸಂಸ್ಥೆ ಅಧ್ಯಕ್ಷರಾಗಿ ಆನಂದ್ ದಂಡೋತಿ ಆಯ್ಕೆ



**ಕಲಬುರಗಿ,ಜು.12–** ರೋಟರಿ ಕ್ಲಬ್ ಆಫ್ ಗುಲ್ಬರ್ಗ ನಾರ್ತ್ ಸಂಸ್ಥೆಯ 2025 –26 ನೇ ಸಾಲಿನ ಅವಧಿಗೆಆನಂದ್ ದಂಡೋತಿ (ಅಧ್ಯಕ್ಷರಾಗಿ), ಶಿವಾನಂದ ಬೇಲೂರೆ (ಕಾ ರ್ಯದರ್ಶಿ)ಯಾಗಿ,ಸಂಪತ ಕಪಾಡಿಯ (ಕ್ಲಬ್ ಟ್ರೇನರ್), ಪ್ರಶಾಂತ್ ಮಾನಕರ್(ಕ್ಲಬ್ ಸಲಹೆಗಾರರು) ದಿನೇಶ್ ಪಾಟೀಲ್ (ನಿರ್ಗಮಿತ ಅಧ್ಯಕ್ಷರು), ಸುಹಾಸ ಕಣಗೆ(ನಿಯೋಜಿತ ಅಧ್ಯಕ್ಷರಾಗಿ), ರಾಮಚಂದ್ರ ಶಾನಭೋಗ್ (ಎಕ್ಸಿಕ್ಯೂಟಿವ್ ಕಾರ್ಯದರ್ಶಿ ), ಚನ್ನವೀರ ಲಿಂಗನವಾಡಿ( ಸಹ ಕಾಯ ರ್ದರ್ಶಿ), ಪ್ರಶಾಂತ ಚಿಟುಗುಪ್ಪಾರ್( ಖಜಾಂಚಿ), ಲಿಂಗರಾಜ್ ಬಾವಿಕಟ್ಟಿ(ಸರ್ಜನ್ ಇಟ್ ಆಮ್ಸ್), ನಿತಿನ್ ತುಸೆ (ಕ್ಲಬ್ ಮೆಂಟರ್), ದೇವೇಂದ್ರ ಸಿಂಗ್ ಚೌಹಾಣ್ (ಕ್ಲಬ್ ಅಡ್ಮಿನಿಸ್ಟೇಷನ್), ನೌಶಾದ್ ಇರಾನಿ (ಮೆಂಬರ್ಶಿಪ್ ಡೆವಲಪ್ಮೆಂಟ್), ಡಾ.ಸಂಜೀವ್ ಗುಪ್ತ (ರೋಟರಿ ಫೌಂಡೇಶನ್), ಶರಣು ಪಪ್ಪಾ (ಸರ್ವಿಸ್ ಪ್ರಾಜೆಕ್ಟ್ ), ಸತೀಶ್ ಹಡಗಲಿಮಠ್(ಪಬ್ಲಿಕ್ ರಿಲೇಶನ್), ರಾಜೇಶ್ ಲಾಹೋಟಿ (ಲೆಟ್ರಸಿ), ನಾರಾಯಣ ಜಹಾಗೀರದಾರ್(ಯೂಥ್ ಸರ್ವಿಸ್), ರೇವಣಸಿದ್ಧ ಮದುರಿ (ವೊಕೇಶನಲ್ ಸರ್ವಿಸ್), ಶಾಮ್ ಸುಂದರ್ ಜೋಶಿ (ಗ್ಲೋಬಲ್ ಗ್ರಾಂಡ್ಸ್ ), ಅಭಿಜಿತ್ ಪಡಶೆಟ್ಟಿ (ಪೊಲಿಯೋ ಪ್ಲಸ್ ), ಚಂದ್ರಶೇಖರ್ ಪಾಟೀಲ್ (ಗ್ರೀಟಿಂಗ್ಸ್ ಅಂಡ್ ಕ್ಲಬ ಬುಲೆಟಿನ್), ವೈಜನಾಥ್ ಪಾಟೀಲ್ (ಕಾನ್ಫರೆನ್ಸ್ ಪ್ರಮೋಷನ್), ಶರಣಬಸಪ್ಪ ಪಾಟೀಲ್ (ವೆಬ್ ಕಮ್ಯುನಿಕೇಶನ್), ಮ ಹಾದೇವ ಸಲಗರ್ (ಸೆವೆನ್ ಏರಿಯಾ ಫೋಕಸ್), ಅರವಿಂದ ಗಂಟೋಜಿ( ಸ್ವಚ್ಛ ಭಾರತ) ನಿರ್ದೇಶಕ ಮಂಡಳಿಯ ಸದಸ್ಯರಾಗಿ ಆಯ್ಕೆಯಾಗಿದ್ದಾರೆ ಇನ್ನರ್ ವೀಲ್ ಕ್ಲಬ್ ಅಫ್ ಗುಲ್ಬರ್ಗ ನಾರ್ತ್ ಸಂಸ್ಥೆಗೆ , ಅಧ್ಯಕ್ಷರಾಗಿ ನಮೃತ ಪತಾಟೆ ಕಾರ್ಯದರ್ಶಿಯಾಗಿ ಸವಿತಾ ಹಾಲಳ್ಳಿ ಪದ ಗ್ರಹಣ ಮಾಡಿದರು ಎಂದು ನಿರ್ಗಮಿತ ಅಧ್ಯಕ್ಷ ದಿನೇಶ್ ಪಾಟೀಲ್ ಮತ್ತು ನಿರ್ಗಮಿತ ಕಾಯ ರ್ದರ್ಶಿ ಆನಂದ್ ದಂಡೋತಿ ತಿಳಿಸಿದ್ದಾರೆ. ಪದಗ್ರಹಣ ಕಾರ್ಯಕ್ರಮದಲ್ಲಿ ಮಣಿಲಾಲ್ ಶಹ, ಮಾಣಿಕ್ ಪವಾರ, ಜ್ಯೋತಿ ತೆಗನೂರ್, ಡಾ. ಗೌತಮ್ ಜಹಗಿರಾದಾರ್, ಮಾಣಿಕ ಮಂದ ಕನಹಳ್ಳಿ.ಉಮಾಗಚ್ಚಿನ್ಮನಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು

ಹಿರಿಯ ರೋಟೇರಿಯನ್ನಗಳಾದ ವಿಜಯಕುಮಾರ ಚಿಟಗುಪ್ಕರ್, ಬಸವರಾಜ ಖಂಡೇರಾವ್ ,ಡಾ ನಾಗನಾಥ್ ಗಚ್ಚಿನಮನಿ, ರಮೇಶ್ ಪಾಟೀಲ್, ರಾಮಕೃಷ್ಣ ಬೋರಾಲ್ಕರ್, ಶಿವರಾಜ್ ಕುಬಾ, ಕಿರಣ್ ಶೆಟ್ಟಿಗಾರ್, ಮಲ್ಲಿಕಾರ್ಜುನ್ ನಗೊರೆ, ಬಾಬುರಾವ್ ಶೇರಿಕಾರ್ ಹಾಗೂ ಮಲ್ಲಿಕಾರ್ಜುನ್ ಬಿರಾದಾರ್ ಉಪಸ್ಥಿತರಿದ್ದರು.

# ಭಿತ್ತಿಶಿಲ್ಪ ಅಂದು-ಇಂದು-ಮುಂದು ವಿಷಯ ಕುರಿತು ಉಪನ್ಯಾಸ



**ಕಲಬುರಗಿ,ಜು.12–**ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು ದಿ ಆರ್ಟ ಇಂಟಿಗ್ರೇಶನ್ ಸೊಸಾಯಿಟಿಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಕಲಿಕಾ ಕಾರ್ಯಾಗಾರ ಜು 10 ರಿಂದ 12ರವರೆಗೆ ಹಮ್ಮಿಕೊಳ್ಳಲಾಗಿದ.

ಶುಕ್ರವಾರ ದಿನದ ಕಾರ್ಯಾಗಾರದಲ್ಲಿ ಗುಬರ್ಗಾ ವಿಶ್ವವಿದ್ಯಾಲಯ ಕಲಬುರಗಿ ದೃಶ್ಯಕಲಾ ಅಧ್ಯಯನ ವಿಭಾಗ ಅಧ್ಯಾಪಕ ಡಾ ಮಲ್ಲಿಕಾರ್ಜುನ ಸಿ. ಭಾಗೋಡಿ ಅವರು ಭಿತ್ತಿಶಿಲ್ಪ ಅಂದು-ಇಂದು-ಮುಂದು ವಿಷಯ ಕುರಿತು ಉಪನ್ಯಾಸ ಸುಮಾರು ಎರಡು ತಾಸು ಭಿತ್ತಿಶಿಲ್ಪ ಇತಿಹಾಸ ಕಲೆ ಬಗ್ಗೆ ಸವಿಸ್ತಾರವಾಗಿ ಮಾಹಿತ ನೀಡಿದರು. ವಿದ್ಯಾರ್ಥಿಗಳ ಜೊತೆ ಸವಾಂದ ನಡೆಸಿದರು.

ದಿ ಆರ್ಟ ಇಂಟಿಗ್ರೇಶನ್ ಚಿತ್ರಕಲಾ ಮಹಾ ವಿದ್ಯಾಲಯ ಪ್ರಾಚಾರ್ಯ ಎಂ ಹೆಚ್. ಬೆಳಮಗಿ ಅವರು ಅಧ್ಯಕ್ಷತೆವಹಿಸಿದ್ದರು. ಅಶೋಕ ಶಟಕಾರ ನಿರೂಪಿಸಿ ವಂದಿಸಿದರು. ಮಹಾವಿದ್ಯಾಲಯದ ಸಿಬಂದಿ ವರ್ಗದವರು ಉಪಸ್ಥಿತರಿದ್ದರು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸಂಚಾಲಕ ಹಣಮಂತ ಡಿ. ಬಾಡದ ಹಾಗೂ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿ ದಾನಯ್ಯ ಎಸ್ ಚೌಕಿಮಠ ಅವರು ವಿದ್ಯಾರ್ಥಿಗಳಿಗೆ ಭಿತ್ತಿ ಶಿಲ್ಪವನ್ನು ಮಾಡಿಸಿದರು.

# ಕೆಇಬಿ ರುದ್ರಪ್ಪಗೆ "ಕಾಯಕ ರತ್ನ" ಪ್ರಶಸ್ತಿ



**ಬಳ್ಳಾರಿ. ಜು.12–** ನಗರದ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಇಂದು ಕೆಇಬಿ ಪಿಂಚಣಿದಾರರ ಸಂಘದಿಂದ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ನವೃತ್ತ ಅಧಿಕಾರಿ ಮತ್ತು ಕಾರ್ಮಿಕ ಮುಖಂಡ ಜಿ. ರುದ್ರಪ್ಪ ಅವರಿಗೆ "ಕಾಯಕ ರತ್ನ" ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕರ್ನಾಟಕ ಇತಿಹಾಸ ಅಕಾಡೆಮಿಯ ಜಿಲ್ಲಾಧ್ಯಕ್ಷ ಟಿ. ಹೆಚ್. ಎಂ. ಬಸವರಾಜ್ ಅವರು ಪ್ರಶಸ್ತಿ ನೀಡಿ ಗೌರವಿಸಿ, 80ನೇ ವರ್ಷದಲ್ಲಿಯೂ 40 ವರ್ಷದ ಹುಡುಗರಂತೆ ಸಮಾಜ, ಕಾರ್ಮಿಕರ ಸೇವೆ, ಪ್ರತಿಯೊಂದು ಸಭೆಯಲ್ಲಿ ದೇವರ ನಾಮಗಳನ್ನು ಹಾಡುತ್ತಾ ತುಂಬಾ ಲವಲವಿಕೆಯಿಂದ ಯಾವ ವಾಹನವೂ ಇಲ್ಲದೆ ಬಸ್ ಗಳಲ್ಲಿಯೇ ಪ್ರಯಾಣಿಸುತ್ತ ಯುಕರಂತೆ ಇದ್ದಾರೆ. ಎಲ್ಲರ ಪ್ರೀತಿಯನ್ನು ಗಳಿಸಿದ ರುದ್ರಪ್ಪನವರು ನೇರ ದಿಟ್ಟ ನಿರಂತರ ಹೋರಾಟದಿಂದ ಬಂದವರು ಎಂದರು.

ಈ ಸಂದರ್ಭದಲ್ಲಿ ಪಿಂಚಣಿ ಸಂಘದಾರರ ಸಂಘದ ಕಾರ್ಯದರ್ಶಿ ಹೊನ್ನೂರಪ್ಪ ಸ್ವಾಗತಿಸಿ ವಂದಿಸಿದರು, ವಿಶ್ವನಾಥ್ ರಲ ಅಧ್ಯಕ್ಷ ಭಾಷಣ ಮಾಡಿದರು, ಬಂಡೆಪ್ಪನವರು ಸಂಘದ ಕಾರ್ಯ ಚಟುವಟಿಕೆಗಳ ಬಗ್ಗೆ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಹಿರಿಯ ಮುಖಂಡರಾದ ಶಿವಲಿಂಗಂ ಕೆ. ಗೂಳಪ್ಪ, ಬಹದ್ದೂರ್ ಇನ್ನೂ ಮುಂತಾದವರು ಉಪಸ್ಥಿತರಿದ್ದರು

# ಪಾಂಡುರಂಗ ದಿಂಡಿ

**ಬೀದರ,ಜು.12–**ಪ್ರತಿ ವರ್ಷದಂತೆ ಈ ವರ್ಷವು ಬೀದರ ನಗರದ ಚೌಬಾರಾ ಹತ್ತಿರದ ಶ್ರೀ ಪಾಂಡುರಂಗ ದೇವಸ್ಥಾನದಲ್ಲಿ ಆಷಾಡ ಏಕಾದಶಿ ನಿಮಿತ್ಯ ಶ್ರೀ ಪಾಂಡುರಂಗ ಪಲ್ಲಕ್ಕಿ ಮೆರವಣಿಗೆ ಪ್ರಾರಂಭವಾಗಿ ಸಾಯಂಕಾಲ ಶಹಾಗಂಜ ದ್ವಾರಕ್ಕೆ( ದಾಮಾಜಿ ಪಂಥ ಅಗಸಿ) ಆಗಮಿಸಿ ಮೊಸರಿನ ಗಡಗಿ(ದಹಿ ಹಂಡಿ) ಒಡೆಯಲಾಯಿತು.

ನಂತರ ಮಹಿಳೆಯರು, ಪರುಷರು ಹಾಗೂ ಮಕ್ಕಳಿಂದ ಫುಗ್ಗಡಿ ಆಟ ಆಡಲಾಯಿತು.ಮೇರವಣಿಗೆ ಸಮಯದಲ್ಲಿ ಅನೇಕ ಕಡೆಯಿಂದ ಭಜನೆ ಮಂಡಳಿರಿಂದ ಪಾಂಡುರಂಗನ ಭಜನೆಯೊಂದಿಗೆ ಸಾಗಿತು.ಮುಖ್ಯ ರಸ್ತೆ, ವಿನಾಯಕ ಚೌಕ, ಚೌಬಾರಾ ಮೂಲಕ ಶ್ರೀ ಪಾಂಡುರಂಗ ದೇವಾಸ್ಥನದ ಮುಖ್ಯದ್ವಾರದಲ್ಲಿ ದಹಿ ಹಂಡಿ ಒಡೆದು ದೇವಸ್ಥಾನದ ಒಳಗಡೆ ಪ್ರವೇಶಿಸಲಾಯಿತು.ಭಕ್ತರಿಗಾಗಿ ಸರಕಾರಿ ಬಾಲಕ ಬಾಲಕಿಯರ ಶಾಲಾ ಮೈದಾನದಲ್ಲಿ ಮಧ್ಯಾಹ್ನ 3:00 ಗಂಟೆಯಿಂದ 5:00 ಗಂಟೆಯವರೆಗೆ ಪ್ರಸಾದ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ದೇವಸ್ಥಾನದ ಅಧ್ಯಕ್ಷರಾದ ಡಿ.ವ್ಹಿ.ಸಿಂಧೋಲ, ಪ್ರಧಾನ ಕಾರ್ಯದರ್ಶಿಗಳಾದ ಶ್ರೀನಿವಾಸ ಪೊ?ಲಾ, ಆಡಳಿತ ಮಂಡಳಿ ಮತ್ತು ಆರ್ಯ ವೈಶ್ಯ ಸಂಘದ ಪದಾಧಿಕಾರಿಗಳು, ಬಿಜೆಪಿ ನಗರ ಅಧ್ಯಕ್ಷ ಶಶಿ ಹೊಸಳ್ಳಿ, ನರೇಶ ಗೌಳಿ, ವಿರೇಶ ಸ್ವಾಮಿ, ಪ್ರಕಾಶ, ಸುನೀಲ ಗೌಳಿ, ಸುಭಾಷ ಪೊಲಾ, ಚಂದ್ರಶೇಖರ ಗಾದಾ, ಸಂಜು ಘನಾತೆ ಮುಂತಾದವರಿಗೆ ಶಾಲು ಹೊದಿಸಿ ಸನ್ಮಾನಿಸಲಾಯಿತು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
9743497111, 9743496111

# ವಿಮಾನ ಪತನ ರಹಸ್ಯ ಬಯಲು

**ನವದೆಹಲಿ,ಜು.12**–ಅಹಮದಾಬಾದ್‌ನಲ್ಲಿ ಸಂಭವಿಸಿದ ಭೀಕರ ವಿಮಾನ ದುರಂತದಲ್ಲಿ 270 ಮಂದಿಯ ಸಾವಿಗೆ ಕಾರಣವಾಗಿರುವ ರಹಸ್ಯ ಬಯಲಾಗಿದೆ. ತಡರಾತ್ರಿ ವಿಮಾನ ಅಪಘಾತ ತನಿಖಾ ಸಂಸ್ಥೆ (ಎಎಐಬಿ) ಪ್ರಾಥಮಿಕ ವರದಿಯನ್ನು ಸಲ್ಲಿಸಿದೆ. ವಿಮಾನದ ಇಂಜಿನ್‌ಗಳಿಗೆ ಇಂಧನ ಪೂರೈಕೆಯಾಗದೆ ಸ್ಥಗಿತಗೊಂಡಿದ್ದೇ ಪತನಕ್ಕೆ ಕಾರಣ ಎಂದು ವರದಿಯಿಂದ ಸ್ಪಷ್ಟವಾಗಿದೆ.ಈ ಮೊದಲು ದುರಂತ ಸಂಭವಿಸಿದ ದಿನದಂದು ವಿಮಾನದ ರೆಕ್ಕೆಗೆ ಹಕ್ಕಿ ಬಡಿದು ಪತನವಾಗಿತ್ತು ಎಂದು ಹೇಳಲಾಗಿತ್ತು. ಆದರೆ, ವಿಮಾನ ಅಪಘಾತ ತನಿಖಾ ಸಂಸ್ಥೆ ಈ ಬಗ್ಗೆ ಕೂಲಂಕುಷ ತನಿಖೆ ನಡೆಸಿ ವಿಮಾನದ ರೆಕ್ಕೆಗೆ ಪಕ್ಷಿ ಬಡಿದಿಲ್ಲ ಎಂಬುದನ್ನು ವರದಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಿದೆ.ವಿಮಾನ ಟೇಕಾಫ್ ಆಗುವ ವೇಳೆ ಸಹ ಪೈಲಟ್ ವಿಮಾನ ಚಲಾಯಿಸುತ್ತಿದ್ದರು. ಕ್ಯಾಪ್ಟನ್ ಮೇಲ್ವಿಚಾರಣೆ ಮಾಡುತ್ತಿದ್ದರು. ವಿಮಾನ ಟೇಕಾಫ್ ಆದ ಕೆಲವೇ ಕ್ಷಣಗಳಲ್ಲಿ ವಿಮಾನದ ಎರಡೂ ಇಂಜಿನ್‌ಗಳಿಗೆ ಇಂಧನ ಪೂರೈಕೆಯಾಗುವುದು ಸ್ಥಗಿತವಾಗಿದೆ.ಪತನವಾಗುವ ಕೆಲವೇ ಸೆಕೆಂಡುಗಳ ಮೊದಲು 'ಮೇ ಡೇ' ಎಂದು ಕೂಗಿದ್ದಾರೆ.ಈ ವೇಳೆ ಪೈಲಟ್‌ಗಳ ನಡುವಿನ ಸಂಭಾಷಣೆಯೂ ದಾಖಲಾಗಿದ್ದು, ಒಬ್ಬ ಪೈಲಟ್ ಇನ್ನೊಬ್ಬ ಪೈಲಟ್‌ಗೆ 'ಏಕೆ ಕಟ್ ಆಫ್ ಮಾಡಿದ್ದೀರಿ" ಎಂದು ಕೇಳಿದ್ದಾರೆ. ಆಗ ಇನ್ನೊಬ್ಬ ಪೈಲಟ್ ನಾನು ಹಾಗೆ ಮಾಡಿಲ್ಲ ಎಂದು ಉತ್ತರಿಸಿದ್ದಾರೆ.ಅಹಮದಾಬಾದ್‌ನಲ್ಲಿ ಸಂಭವಿಸಿದ ಡ್ರೀಮ್ ಲೈನರ್ ವಿಮಾನದಲ್ಲಿ ಏನೆಲ್ಲ ಸಮಸ್ಯೆಗಳಿದ್ದವು ಎಂಬುದನ್ನು ತನಿಖಾ ಸಂಸ್ಥೆ 15 ಪುಟಗಳ ವರದಿಯಲ್ಲಿ ಬಹಿರಂಗಪಡಿಸಿದೆ.ಪೈಲ್‌ಗಳ ಕಾಕ್‌ಪಿಟ್ ಧ್ವನಿ ರೆಕಾರ್ಡಿಂಗ್ ಡೇಟಾವನ್ನು ಉಲ್ಲೇಖಿಸಲಾಗಿದೆ.ವಿಮಾನವು ವಾಯು ಪ್ರದೇಶಕ್ಕೆ ತಲುಪಿದ ಕೆಲ ಸೆಕೆಂಡುಗಳಲ್ಲಿ ಇಂಜಿನ್ ಸ್ಥಗಿತಗೊಂಡಿರುವುದು ದೃಢಪಟ್ಟಿದೆ.ಕೆಲವು ಸೆಕೆಂಡುಗಳಿಗೆ ಮುನ್ನ ನಡೆದ ಸಂಭಾಷಣೆಯು ಒಂದು ಭಾಗದಲ್ಲಿ ಇದು ಇಳಿದಿದೆ. ವಿಮಾನವು 8 ಡಿಗ್ರಿ ಮೂಗು ಮೇಲಕ್ಕೆತ್ತಿದ ಸ್ಥಿತಿಯಲ್ಲಿತ್ತು. ಆದರೆ, ಇಂಜಿನ್‌ಗಳು ಆಫ್ ಆಗಿದ್ದವು. ಈ ಕಾರಣದಿಂದಲೇ ವಿಮಾನ ಏರಲು ಸಾಧ್ಯವಾಗಲಿಲ್ಲ ಎಂದು ತನಿಖಾ ತಂಡ ವರದಿಯಲ್ಲಿ ಉಲ್ಲೇಖಿಸಿದೆ.ಟೇಕಾಫ್ ಆದ 3 ಸೆಕೆಂಡುಗಳ ಬಳಿಕ 2 ಇಂಜಿನ್‌ಗಳ ಇಂಧನ ಕಂಟ್ರೋಲ್ ಸ್ವಿಚ್‌ಗಳು ರನ್ ವೇಯಿಂದ ಕಟ್ ಆಪ್‌ಗೆ ಬದಲಾಗಿವೆ.ಇದರಿಂದಾಗಿ ಥ್ರಸ್ಟ್ ಏಕಾಏಕಿ ಕಡಿಮೆಯಾಯಿತು. ಇದರಿಂದ ತಾಂತ್ರಿಕ ದೋಷ ಅಥವಾ ಆಕಸ್ಮಿಕವಾಗಿ ಸ್ವಿಚ್ ಆಫ್ ಆಗಿರಬಹುದು ಎಂದು ತನಿಖಾ ತಂಡ ಶಂಕೆ ವ್ಯಕ್ತಪಡಿಸಿದೆ.ವಿಮಾನದ ಡೇಟಾ ರೆಕಾರ್ಡರ್ ಪ್ರಕಾರ ಇಂಜಿನ್ ಒಂದನ್ನು ಸ್ವಯಂಚಾಲಿತವಾಗಿ ಮರು ಪ್ರಾರಂಭಿಸಲು ಪ್ರಯತ್ನಿಸಿ ಅದು ಯಶಸ್ವಿಯಾಗಿದೆ. ಆದರೆ, ಇಂಜಿನ್ 2ನ್ನು ಪುನಾರಂಭಿಸಲು ಸಾಧ್ಯವಾಗಲಿಲ್ಲ. ಈ ಕಾರಣಕ್ಕಾಗಿ ರಾಮ್‌ಏರ್ ಟರ್ಬೈನ್‌ನ್ನು ತುರ್ತು ವಿದ್ಯುತ್ ಮೂಲವಾಗಿ ಬಳಸಲಾಗಿತ್ತು. ಇದು ಟೇಕಾಫ್ ಆದ ತಕ್ಷಣವೇ ಕಾರ್ಯನಿರ್ವಹಿಸಲು ಪ್ರಾರಂಭವಾಗಿದೆ. ಇದರಿಂದಾಗಿ ಅಗತ್ಯ ಸಿಸ್ಟಂಗಳಿಗೆ ವಿದ್ಯುತ್ ಸಂಪೂರ್ಣವಾಗಿ ಸ್ಥಗಿತಗೊಂಡಿತ್ತು ಎಂದು ವರದಿ ತಿಳಿಸಿದೆ.ಜೂ. 12 ರಂದು ಈ ದುರಂತದಲ್ಲಿ ಏರ್ ಇಂಡಿಯಾ ವಿಮಾನ ಸಿಬ್ಬಂದಿ ಪ್ರಯಾಣಿಕರು ಮತ್ತು ವಿಮಾನ ಬಿದ್ದ ಎಂಬಿಬಿಎಸ್ ಹಾಸ್ಟೆಲ್ ಕಟ್ಟಡದಲ್ಲಿರುವವರೂ ಸೇರಿದಂತೆ 270 ಮಂದಿ ಸಾವನ್ನಪ್ಪಿದ್ದರು.ವಿಮಾನ ಟೇಕಾಫ್ ಕೆಲವೇ ಕ್ಷಣಗಳಲ್ಲಿ ಏರ್‌ಇಂಡಿಯಾ–171 ವಿಮಾನವು ಅಹಮದಾಬಾದ್‌ನ ಮೇಘನಿ ನಗರದ ವೈದ್ಯಕೀಯ ಕಾಲೇಜಿನ ಸಂಕಿರಣದ ಮೇಲೆ ಅಪ್ಪಳಿಸಿತ್ತು. ಈ ಘೋರ ದುರಂತದಲ್ಲಿ ಬ್ರಿಟನ್ ಪ್ರಜೆ ಆಶ್ಚರ್ಯಕರ ರೀತಿಯಲ್ಲಿ ಪಾರಾಗಿದ್ದರು.ಪ್ರಾಥಮಿಕ ತನಿಖೆಯ 15 ಅಂಶಗಳುಅಹಮದಾಬಾದ್ ನಲ್ಲಿ ಸಂಭವಿಸಿದ ವಿಮಾನ ದುರಂತದ ಬಗ್ಗೆ ಕಪ್ಪು ಪೆಟ್ಟಿಗೆಯಿಂದ ಸಂಗ್ರಹಿಸಿ ಮಾಹಿತಿಯನ್ನು ತನಿಖಾ ಸಂಸ್ಥೆ ವಿಶ್ಲೇಷಣೆ ನಡೆಸಿ 15 ಅಂಶಗಳನ್ನು ಉಲ್ಲೇಖಿಸಿವೆ.ವಿಮಾನವು ಅಹಮದಾಬಾದ್



ವಿಮಾನ ನಿಲ್ದಾಣದಿಂದ ಹೊರಟು 0809 ಯುಟಿಸಿ ಬಳಿ ಜೂನ್ 12 ರಂದು ಮಧ್ಯಾಹ್ನ 1.39ಕ್ಕೆ ಪತನಗೊಂಡಿತು.ವಿಮಾನವು ಕಟ್ಟಡಕ್ಕೆ ಡಿಕ್ಕಿ ಹೊಡೆದ ರಭಸಕ್ಕೆ ಬೆಂಕಿ ಹೊತ್ತಿಕೊಂಡು ಸುಟ್ಟು ಭಸ್ಮವಾಯಿತು. ವಿಮಾನದಲ್ಲಿದ್ದ 12 ಸಿಬ್ಬಂದಿ ಹಾಗೂ 229 ಮಂದಿ ಪ್ರಯಾಣಿಕರು ಸಾವನ್ನಪ್ಪಿ ಒಬ್ಬರು ಗಾಯಗೊಂಡರು. ವಿಮಾನ ಪತನ ಗೊಂಡು ವೈದ್ಯಕೀಯ ಕಾಲೇಜಿನ ಹಾಸ್ಟೆಲ್ ನಲ್ಲಿದ್ದ 19 ಜನ ಮೃತಪಟ್ಟಿದ್ದಾರೆ.ವಿಮಾನದಲ್ಲಿ 'ಸಿ'ಎಟಿ ಕನಿಷ್ಠ ಸಾಧನೆಗಳ ಪಟ್ಟಿ ಹೊಂದಿತ್ತು. ಇದರಲ್ಲಿ ವಿಮಾನದ ಡೆಕ್ ಡೋಡರ್‌ನ ದೃಶ್ಯ ದಾಖಲಿಸುವ ವ್ಯವಸ್ಥೆ, ವಿಮಾನ ನಿಲ್ದಾಣ ನಕ್ಷೆ, ಕೋರ್ ನೆಟ್ ವರ್ಕ್ ಹಾಗೂ ಎಫ್ ಡಿ ಪ್ರಿಂಟರ್ ಗಳು ಇದ್ದವು. ಇವುಗಳನ್ನು ಜೂನ್ 9 ರಂದು ಪರಿಶೀಲಿಸಿ ಇವುಗಳ ಮಾನ್ಯತೆ ಜೂನ್19 ರವರೆಗೂ ಇತ್ತು. ವಿಮಾನದಲ್ಲಿದ್ದ ನೈಟ್ರೋಜೆನ್ ಕಾರ್ಯಕ್ಷಮತೆಯ ಮಾನ್ಯತೆ ಜೂನ್ 26 ರವರೆಗೂ ಇತ್ತು.ವಿಮಾನ ದುರಂತಕ್ಕೀಡಾಗುವ ಮುನ್ನ ಸ್ಥಿತಿ ಸಂದೇಶಕ್ಕಾಗಿ ಪೈಲಟ್ ದೋಷ ವರದಿಗೆ ನಮೂದಿಸಲಾಗಿತ್ತು. ಇದಕ್ಕೆ ಪೂರಕವಾಗಿ ದೋಷ ನಿವಾರಣೆಯನ್ನು ನಡೆಸಿದ ನಂತರವಷ್ಟೇ ವಿಮಾನ ಹಾರಾಟಕ್ಕೆ ಅನುಮತಿಕೊಟ್ಟಿತ್ತು. ಇದನ್ನು ದುರಂತ ನಡೆದ ದಿನ ಮಧ್ಯಾಹ್ನ 12.10ಕ್ಕೆ ನಡೆಸಲಾಗಿದೆ.ಹಾರಾಟಕ್ಕೂ ಮೊದಲು ಬೆಳಿಗ್ಗೆ 11.55ಕ್ಕೆ ಈ ವಿಮಾನದಲ್ಲಿ ಪ್ರಯಾಣಿಸಲಿರುವ ಸಿಬ್ಬಂದಿ ಉಸಿರಾಟ ತಪಾಸಣೆ ನಡೆಸಲಾಗಿದೆ. ಅವರೆಲ್ಲರೂ ಪ್ರಯಾಣಕ್ಕೆ ಅರ್ಹ ಎಂದು ಹೇಳಲಾಗಿದೆ.ವಿಮಾನವು 1.37ಕ್ಕೆ ರನ್ ವೇ 23 ರಿಂದ ತನ್ನ ಹಾರಾಟ ಆರಂಭಿಸಿತು.ಸರಿಯಾಗಿ 1.38ಕ್ಕೆ ನೆಲವನ್ನು ಬಿಟ್ಟು ಆಗಸದತ್ತ ಸಂಚರಿಸಿತು. ಹಾರಾಟಕ್ಕೆ ಅಗತ್ಯವಾದ 180 ನಾಟ್ಸ್ ವೇಗವನ್ನು ಪಡೆದುಕೊಂಡಿತ್ತು.ಗರಿಷ್ಠ ವೇಗ ಪಡೆದುಕೊಂಡ ಹೊತ್ತಿಗೆ ಇಂಜಿನ್ –1 ಹಾಗೂ ಇಂಜಿನ್–2 ಕ್ಕೆ ಇಂಧನ ಪೂರೈಕೆ ಸ್ಥಗಿತಗೊಂಡಿದೆ. ಇದು ರನ್ ಸ್ಥಿತಯಿಂದ 'ಕಟ್ ಆಫ್' ಸ್ಥಿತಿಗೆ ತಲುಪಿದೆ. ಈ ಎರಡು ಇಂಜಿನ್ ಗಳು ಒಂದು ಸೆಕೆಂಟ್ ಗಳ ಅಂತರದಲ್ಲಿ ತಮ್ಮ ಕಾರ್ಯ ಸ್ಥಗಿತಗೊಳಿಸಿವೆ.ಕಾಕ್ ಪಿಟ್ ನ ಸಂಭಾಷಣೆಯೂ ಕಪ್ಪು ಪೆಟ್ಟಿಗೆಯಲ್ಲಿ ದಾಖಲಾಗಿದ್ದು, ಇಂಜಿನ್ ತನ್ನ ಕಾರ್ಯ ಸ್ಥಗಿತಗೊಳಿಸಿದ್ದರ ಕುರಿತು ಒಬ್ಬ ಪೈಲಟ್ ಮತ್ತೊಬ್ಬರನ್ನು ಕೇಳಿದ್ದಾರೆ. ತಾನು ಹಾಗೇ ಮಾಡಿಲ್ಲ ಎಂದು ಮತ್ತೊಬ್ಬ ಪೈಲಟ್ ಉತ್ತರಿಸಿದ್ದಾರೆ.ವಿಮಾನ ನೆಲವನ್ನು ಬಿಟ್ಟು ಹಾರಿದ ಸಂದರ್ಭದಲ್ಲಿ ಆರಂಭಿಕ ಆರೋಹಣದಲ್ಲಿ ಹಾಮ್ ಏರ್ ಟರ್ಬೈನ್ ಸಿಸಿಟಿವಿ ದೃಶ್ಯದಲ್ಲಿ ಕಾಣಿಸುತ್ತವೆ.ಎರಡು ಇಂಜಿನ್ ಗಳ ( ಇಂಜಿನ್ –1: 1:38:52 ಹಾಗೂ ಇಂಜಿನ್ –2–1.38:56) ಇಂಧನ ಪೂರೈಕೆ ಸ್ಥಿತಿಯೂ ಮಧ್ಯಾಹ್ನ 1.38ಕ್ಕೆ ಕಟ್ ಆಫ್ ಸ್ಥಿತಿಯಿಂದ ರನ್ ಸ್ಥಿತಿಗೆ ಮರಳಿ ತರಲಾಗಿದೆ. ಈ ವೇಳೆಗೆ ಎರಡು ಇಂಜಿನ್‌ಗಳ ತಾಪಮಾನ ಏರಿಕೆಯಾಗಿದೆ. ಇದು ವಿಮಾನವನ್ನು ಮರಳಿ ಸಹಜ ಸ್ಥಿತಿಗೆ ತರುವ ಪ್ರಯತ್ನವಾಗಿದೆ.ಸ್ಥಗಿತಗೊಂಡಿದ್ದ ವಿಮಾನದ ಇಂಜಿನ್ □ 1 ಸಹಜ ಸ್ಥಿತಿಗೆ ಮರಳುತ್ತಿತ್ತು. ಇಂಜಿನ್ –2 ಸಹ ತನ್ನ ಕಾರ್ಯಾಚರಣೆ ಆರಂಭಿಸಿತು. ಆದರೆ ಅಗತ್ಯ ವೇಗವನ್ನು ವಿಮಾನಕ್ಕೆ ನೀಡಲು ಅಸಾಧ್ಯವಾಗಲಿಲ್ಲ. ಈ ಹಂತದಲ್ಲಿ ಪದೇ ಪದೇ ಇಂಧನ ಮರು ಪೂರೈಕೆ ಯತ್ನ ನಡೆಸಲಾಗಿದೆ.ಮಧ್ಯಾಹ್ನ 1:39:05ಕ್ಕೆ 'ಮೇ ಡೇ, ಮೇ ಡೇ, ಮೇ, ಡೇ' ಕರೆಯನ್ನು ಪೈಲಟ್ ನೀಡಿರುವುದು ದಾಖಲಾಗಿದೆ. ವಿಮಾನದಲ್ಲಿದ್ದ ರೆಕಾರ್ಡ್ 1:39:11ಕ್ಕೆ ಪ್ರಾಫ್ ಹ್ಯಾಂಡಲ್ ಸರಿಯಾಗಿ 5 ಡಿಗ್ರಿ ಟೆಕ್ ಆಫ್ ಸ್ಥಿತಿಯಲ್ಲಿದೆ. ಮತ್ತು ಲ್ಯಾಂಡಿಂಗ್ ಗೇರ್ ಲಿವರ್ ಡೌನ್ ಸ್ಥಿತಿಯಲ್ಲಿರುವುದು ಘಟನೋತ್ತರ ತನಿಖೆಯ ಸಂದರ್ಭದಲ್ಲಿ ಕಂಡು ಬಂದಿದೆ. ಆದರೆ 'ಥ್ರಸ್ಟ್ ಲಿವರ್' ಅನುಪಯೋಗ ಸ್ಥಿತಿಯಲ್ಲಿರುವುದು ಕಂಡು ಬಂದಿದೆ. ದುರಂತ ಸಂಭವಿಸವವರೆಗೂ ಅದು ಇತ್ತು ಎಂದು ದಾಖಲೆಗಳಿಂದ ಉಲ್ಲೇಖವಾಗಿದೆ.

ಕಪ್ಪು ಪೆಟ್ಟಿಗೆಯಿಂದ ವಿಮಾನ ಹಿಂದಿನ 69 ಗಂಟೆಗಳ ಹಾರಾಟದ ಮಾಹಿತಿ ಮತ್ತು ಎರಡು ಗಂಟೆಗಳ ಕಾಕ್‌ಪಿಟ್‌ನ ಧ್ವನಿಯನ್ನು ಯಶಸ್ವಿಯಾಗಿ ಸಂಗ್ರಹಿಸಲಾಗಿದೆ. ಅಪಘಾತದಲ್ಲಿ ಕಪ್ಪು ಪೆಟ್ಟಿಗೆಗೆ ಹಾನಿಯಾಗಿತ್ತು. ಇದರಲ್ಲಿನ ಮಾಹಿತಿ ಸಂಗ್ರಹಿಸುವುದು ಸುಲಭವಾಗಿ ಸಾಧ್ಯವಾಗಿರಲಿಲ್ಲ.

ಆತುರದ ತೀರ್ಮಾನ ಬೇಡ: ನಾಯ್ಡು

ಕಳೆದ ತಿಂಗಳು ಅಹಮದಾಬಾದ್–ಲಂಡನ್ ಏರ್ ಇಂಡಿಯಾ ವಿಮಾನ ಅಪಘಾತದ ಕುರಿತು ವಿಮಾನ ಅಪಘಾತ ತನಿಖಾ ಬ್ಯೂರೋ ನೀಡಿದ ವರದಿ ಪ್ರಾಥಮಿಕ ಸಂಶೋಧನೆಗಳನ್ನು ಆಧರಿಸಿದೆ ಮತ್ತು ಅಂತಿಮ ವರದಿ ಬಿಡುಗಡೆಯಾಗುವವರೆಗೆ ಯಾರೂ ತೀರ್ಮಾನಗಳಿಗೆ ಬರಬಾರದು ಎಂದು ಹೇಳಿದ್ದಾರೆಏರ್ ಇಂಡಿಯಾ ಅಪಘಾತ ಪ್ರಾಥಮಿಕ ವರದಿ ಬಗ್ಗೆ ಪ್ರತಿಕ್ರಿಯಿಸಿದ ಅವರು "ನಾವು ಪೈಲಟ್‌ಗಳ ಕಲ್ಯಾಣ ಮತ್ತು ಯೋಗಕ್ಷೇಮದ ಬಗ್ಗೆಯೂ ಕಾಳಜಿ ವಹಿಸುತ್ತೇವೆ. ಆದ್ದರಿಂದ ಈ ಹಂತದಲ್ಲಿ ಯಾವುದೇ ತೀರ್ಮಾನಗಳಿಗೆ ಬರಬೇಡಿ ಅಂತಿಮ ವರದಿಗಾಗಿ ಕಾಯೋಣ" ಎಂದು ಅವರು ಹೇಳಿದ್ದಾರೆವಿಮಾನ ಅಪಘಾತದ ಬಗ್ಗೆ ಯಾವುದೇ ತೀರ್ಮಾನಕ್ಕೆ ಬರಬಾರದು. ವಿಶ್ವದಲ್ಲೇ ಅತ್ಯಂತ ಅದ್ಭುತವಾದ ಪೈಲಟ್‌ಗಳು ಮತ್ತು ಸಿಬ್ಬಂದಿ ನಮ್ಮಲ್ಲಿದ್ದಾರೆ ಎಂದು ತಿಳಿಸಿದ್ದಾರೆ.ದೇಶದ ಪೈಲಟ್‌ಗಳು ಮತ್ತು ಸಿಬ್ಬಂದಿ ಮಾಡುತ್ತಿರುವ ಎಲ್ಲಾ ಪ್ರಯತ್ನಗಳನ್ನು ಪ್ರಶಂಸಿಸಲೇಬೇಕು, ಅವರು ನಾಗರಿಕ ವಿಮಾನಯಾನದ ಬೆನ್ನೆಲುಬು.ನಾಗರಿಕ ವಿಮಾನಯಾನದ ಪ್ರಾಥಮಿಕ ಸಂಪನ್ಮೂಲ. ಪೈಲಟ್‌ಗಳ ಕಲ್ಯಾಣ ಮತ್ತು ಯೋಗಕ್ಷೇಮದ ಬಗ್ಗೆಯೂ ಕಾಳಜಿ ವಹಿಸುತ್ತೇವೆ. ಆದ್ದರಿಂದ ಈ ಹಂತದಲ್ಲಿ ಯಾವುದೇ ತೀರ್ಮಾನಗಳಿಗೆ ಬರಬೇಡಿ ಎಂದಿದ್ದಾರೆ ತನಿಖೆಗೆ ಸಂಪೂರ್ಣ ಸಹಕಾರ :ವಿಮಾನ ದುರಂತಕ್ಕೆ ಸಂಬಂಧಿಸಿದಂತೆ ತನಿಖಾ ತಂಡಕ್ಕೆ ಸಂಪೂರ್ಣ ಸಹಕಾರ ನೀಡುವುದಾಗಿ ಬೋಯಿಂಗ್ ಮುಖ್ಯಸ್ಥ ಕೆಲ್ಲಿಆರ್ಟ್ ಬರ್ಗ್ ಹೇಳಿದ್ದಾರೆ.ವಿಮಾನ ದುರಂತಕ್ಕೆ ಸಂಬಂಧಪಟ್ಟಂತೆ ಪ್ರಾಥಮಿಕ ವರದಿ ಬಿಡುಗಡೆಯಾದ ಬೆನ್ನಲ್ಲೆ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.ವಿಮಾನ ದುರಂತದಲ್ಲಿ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬ ಸದಸ್ಯರೊಂದಿಗೆ ನಾವಿದ್ದೇವೆ. ಈ ಬಗ್ಗೆ ಏರ್ ಇಂಡಿಯಾಮುಖ್ಯಸ್ಥ ಎನ್. ಚಂದ್ರಶೇಖರನ್ ಅವರೊಂದಿಗೆ ಮಾತನಾಡಿದ್ದು, ಸಂಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದ್ದೇವೆ. ಭಾರತದ ವಿಮಾನಅಪಘಾತ ತನಿಖಾ ಸಂಸ್ಥೆ ನೇತೃತ್ವದಲ್ಲಿ ನಡೆಯುತ್ತಿರುವ ತನಿಖೆಗೂ ಸಂಪೂರ್ಣ ಸಹಕಾರ ನೀಡುತ್ತೇವೆ ಎಂದು ಹೇಳಿದ್ದಾರೆ.ವಿಮಾನ ಅಪಘಾತಕ್ಕೆ ಸಂಬಂಧಿಸಿದಂತೆ ಅಂತಿಮ ವರದಿ ಬರುವ ತನಕ ಯಾವುದೇ "ಆತುರದ ತೀರ್ಮಾನಗಳಿಗೆ ಬರಬೇಡಿ ಕೇಂದ್ರ ವಿಮಾನ ಯಾನ ಸಚಿವ ಕಿಂಜರಪು ರಾಮ್ ಮೋಹನ್ ನಾಯ್ಡು ಹೇಳಿದ್ದಾರೆ

## ಸಿಎಂ ಬದಲಾವಣೆ ನಿರ್ಧಾರ ಹೈಕಮಾಂಡ್‌ಗೆ ಬಿಟ್ಟದ್ದು



**ಬೆಂಗಳೂರು,ಜು.12**–:ಮುಖ್ಯಮಂತ್ರಿ ಬದಲಾವಣೆ ನಿರ್ಧಾರ ಹೈಕಮಾಂಡ್‌ಗೆ ಬಿಟ್ಟದ್ದು, ಈ ಬಗ್ಗೆ ಹೈಕಮಾಂಡೇ ಮಾತನಾಡುತ್ತಿಲ್ಲ ಎಂದಾಗ ನಾವುಗಳು ಚರ್ಚೆ ನಡೆಸುವುದು ಅರ್ಥವಿಲ್ಲ ಎಂದು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ ಖರ್ಗೆ ಹೇಳಿದರು.

ಹುಬ್ಬಳ್ಳಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿಯನ್ನು ಬದಲಾಯಿಸಬೇಕೋ ಬೇಡವೋ ಎಂಬುದನ್ನು ಪಕ್ಷದ ಹೈಕಮಾಂಡ್ ತೀರ್ಮಾನಿಸುತ್ತದೆ. ಈ ಬಗ್ಗೆ ಹೈಕಮಾಂಡ್ ಎಲ್ಲಿಯೂ ಮಾತನಾಡಿಲ್ಲ. ಹೀಗಿರುವಾಗ ನಾವು ಆ ಬಗ್ಗೆ ನಾವು–ನೀವು ಚರ್ಚೆ ನಡೆಸುವುದು ಅಪ್ರಸ್ತುತ ಎಂದು ಅವರು ಹೇಳಿದರು.

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಬಗ್ಗೆಯೂ ಚರ್ಚೆ ನಡೆದಿಲ್ಲ. ಎಲ್ಲವನ್ನೂ ಹೈಕಮಾಂಡ್ ನಿರ್ಧಾರ ಮಾಡುತ್ತದೆ ಎಂದು ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸುತ್ತ ಹೇಳಿದರು.

ಮುಖ್ಯಮಂತ್ರಿ ಬದಲಾವಣೆ ಕುರಿತು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆಯವರಾಗಲಿ, ಕಾಂಗ್ರೆಸ್ ರಾಜ್ಯ ಉಸ್ತುವಾರಿ ಸುರ್ಜೇವಾಲಾ ಅವರಾಗಲಿ ಯಾರೂ ಎಲ್ಲಿಯೂ ಚರ್ಚಿಸಿಲ್ಲ. ಸಿಎಂ ಬದಲಾಯಿಸುವ ಅಧಿಕಾರ ಇರುವ ವರಿಷ್ಠರೇ ಸುಮ್ಮನಿರುವಾಗ ಈ ಬಗ್ಗೆ ಚರ್ಚೆಗಳನ್ನು ನಡೆಸುವುದು ಸರಿಯಲ್ಲ ಎಂದು ಅವರು ಹೇಳಿದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಅವರು ಕಾಂಗ್ರೆಸ್ ಶಾಸಕರ ಜತೆ ಸಭೆ ನಡೆಸಿದ್ದು, ಸರ್ಕಾರದ ಯೋಜನೆಗಳು ಜನರಿಗೆ ತಲುಪಿವೆಯೇ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳು ಆಗಿವೆಯೇ ಎಂಬ ಬಗ್ಗೆ ಚರ್ಚೆ, ಅವರು ಮುಖ್ಯಮಂತ್ರಿ ಬದಲಾವಣೆ ಸೇರಿದಂತೆ ಯಾವ ವಿಚಾರಗಳ ಬಗ್ಗೆಯೂ ಚರ್ಚೆ ನಡೆಸಿಲ್ಲ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು 2 ದಿನಗಳ ಹಿಂದೆ ದೆಹಲಿಯಲ್ಲಿದ್ದಾಗವರಿಷ್ಠನಾಯಕ ರಾಹುಲ್‌ಗಾಂಧಿಯವರನ್ನು ಭೇಟಿ ಮಾಡಲು ಸಾಧ್ಯವಾಗಿಲ್ಲದಿರುವುದನ್ನುನೋಡಿದರೆ ರಾಜ್ಯದ ಕಾಂಗ್ರೆಸ್ ನಾಯಕರು ದುರ್ಬಲರಾಗಿದ್ದಾರೆ ಎಂಬೆಲ್ಲ ವ್ಯಾಖ್ಯಾನಗಳು ಸರಿಯಲ್ಲ. ರಾಹುಲ್‌ಗಾಂಧಿಯವರು ಬಿಹಾರ ಪ್ರವಾಸದಲ್ಲಿದ್ದ ಕಾರಣ ಭೇಟಿ ಸಾಧ್ಯವಾಗಿಲ್ಲ ಅಷ್ಟೆ. ಅದಕ್ಕೆ ಏನೇನೋ ಅರ್ಥ ಕಲ್ಪಿಸುವುದು ಸರಿಯಲ್ಲ ಎಂದರು.

## ಶಾಸಕರ ಬೆಂಬಲ ಕೇಳುವ ಸಮಯ ಬಂದಿಲ್ಲ

**ಬೆಂಗಳೂರು,ಜು.12**–ಮುಖ್ಯಮಂತ್ರಿಯಾಗಿ 5 ವರ್ಷ ನಾನೇ ಮುಂದುವರೆಯುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವ ವಿಚಾರ ಕಾಂಗ್ರೆಸ್ ವಲಯದಲ್ಲಿ ಚರ್ಚೆಯಾಗುತ್ತಿರುವುದು ನಮಗೆ ಗೊತ್ತಿಲ್ಲ. ಈ ವಿಚಾರವನ್ನು ಹೇಳಿರುವ ಮುಖ್ಯಮಂತ್ರಿಯವರನ್ನೇ ಏಕೆ ಹೀಗೆ ಹೇಳಿದ್ದಾರೆ ಎಂದು ಕೇಳುವುದು ಸೂಕ್ತ. ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಶಾಸಕರ ಬೆಂಬಲ ಪಡೆಯುವ ಪರಿಸ್ಥಿತಿ ಇಲ್ಲ ಹಾಗೆಯೇ ಬಲಾಬಲ ಪ್ರದರ್ಶಿಸುವ ವ್ಯಕ್ತಿತ್ವ ಶಿವಕುಮಾರ್ ಅವರದಲ್ಲ ಎಂದು ಮಾಜಿ ಸಂಸದ ಡಿ.ಕೆ ಸುರೇಶ್ ಹೇಳಿದರು.



ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ. ಆದರೂ ಪದೇ ಪದೇ ಈ ವಿಚಾರ ಯಾಕೆ ಚರ್ಚೆಯಾಗುತ್ತಿದೆಯೋ ಗೊತ್ತಿಲ್ಲ. ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಆತುರದಲ್ಲೂ ಇಲ್ಲ ಆತಂಕದಲ್ಲೂ ಇಲ್ಲ ಎಂದು ಅವರು ಹೇಳಿದರು. ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಪಕ್ಷದ ಪ್ರಾಮಾಣಿಕ ಕಾರ್ಯಕರ್ತ, ಬಲಾಬಲ ಪ್ರದರ್ಶನ ಮಾಡುವ ವ್ಯಕ್ತಿತ್ವ ಅವರದಲ್ಲ. ಶಿವಕುಮಾರ್ ಅವರು ಈಗ ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಶಾಸಕರ ಬೆಂಬಲ ಕೇಳುವ ಸಮಯವೇ ಸೃಷ್ಟಿಯಾಗಿ ಲ್ಲ.ಹೀಗಿದ್ದರೂ ಮುಖ್ಯಮಂತ್ರಿ ಬದಲಾವಣೆ ವಿಚಾರ ಮಾತನಾಡುತ್ತಿರುವವರನ್ನೇ ಈ ಬಗ್ಗೆ ಕೇಳುವುದು ಸೂಕ್ತ ಎಂದರು. ಮುಖ್ಯಮಂತ್ರಿ ಕುರ್ಚಿ ಖಾಲಿ ಇಲ್ಲ ಎಂದ ಮೇಲೆ ಸಿದ್ದರಾಮಯ್ಯ ಅವರು ಪದೇ ಪದೇ ನಾನೇ 5 ವರ್ಷ ಸಿಎಂಎಂದು ಹೇಳುವ ಅಗತ್ಯವಿದೆಯೇ ಎಂಬ ಪ್ರಶ್ನೆಗೆ ನಾನು ಈ ವಿಚಾರವಾಗಿ ಮಾತನಾಡಲು ಬಹಳ ಸಣ್ಣವನು ಎಂದರು.

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರು ಅಧಿಕಾರ ವಹಿಸಿಕೊಂಡು 2 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಅವರೇ ಮುಖ್ಯಮಂತ್ರಿಯಾಗಿ ಮುಂದುವರೆಯುತ್ತಿರುವಾಗ ಬದಲಾವಣೆ ವಿಚಾರ ಚರ್ಚೆಯಾಗುತ್ತಿರುವುದು ನಮಗೆ ಗೊತ್ತಿಲ್ಲ ಎಂದರು.ಕಾಂಗ್ರೆಸ್ ಪಕ್ಷದಲ್ಲಿ ಯಾವುದೇ ಜಗಳವಿಲ್ಲ ಕಾಂಗ್ರೆಸ್ ಪಕ್ಷದ ವರಿಷ್ಠರು ಮುಖ್ಯಮಂತ್ರಿಗಳು,ಅಧ್ಯಕ್ಷರು ಹಾಗೂ ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಕೂಡ ಈಗಾಗಲೇ ಈ ವಿಚಾರವಾಗಿಸ್ಪಷ್ಟನೆನೀಡಿರುವುದು ಸಿದ್ದರಾಮಯ್ಯ ಅವರು ನಾಐಕತ್ವದಲ್ಲಿ ಮುಂದುವರೆಯಲಿದ್ದಾರೆ ಎಂದು ಹೇಳಿದ್ದಾರೆ. ಇಷ್ಟಾದರೂ ಮಾಧ್ಯಮಗಳಿಗೆ ಯಾಕೆ ಗೊಂದಲವಿದೆಯೋ ಗೊತ್ತಿಲ. ಶಿವಕುಮಾರ್ ಅವರು ಪಕ್ಷ ಕೊಟ್ಟಿರುವ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿಭಾಯಿಸುತ್ತಿದ್ದಾರೆ. ಕಾಂಗ್ರೆಸ್ ವರಿಷ್ಠರಿಗೆ ಗೌರವ ನೀಡುವ ವ್ಯಕ್ತಿತ್ವವನ್ನು ಶಿವಕುಮಾರ್ ಹೊಂದಿದ್ದಾರೆ ಎಂದರು. ಉಪಮುಖ್ಯಮಂತ್ರಿ ಡಿಕೆಶಿವಕುಮಾರ್ ಅವರು ನಂಬುವ ಧಾರ್ಮಿಕ ಗುರುಗಳು ಅವರು ಮುಖ್ಯಮಂತ್ರಿಯಾಗುತ್ತಾರೆ ಎಂದು ಹೇಳಿರುವ ಬಗ್ಗೆ ಪ್ರತಿಕ್ರಿಯಿಸಿದ ಡಿಕೆ ಸುರೇಶ್ ಅವರು ಪ್ರತಿಯೊಬ್ಬರಿಗೂ ಒಬ್ಬೊಬ್ಬರು ಸಿಎಂ ಆಗಲಿ ಎಂಬ ಆಸೆಯಿರುತ್ತದೆ. ಪ್ರತಿ ಜಿಲ್ಲೆ ಸಮುದಾಯದವರು ನಮ್ಮವರು ಸಿಎಂ ಆಗಲಿ ಎಂಬ ಆಶಯ ವ್ಯಕ್ತಪಡಿಸುವುದು ಸಹಜ. ಇಂತಹ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದನ್ನು ತಪ್ಪು ಎಂದು ಹೇಳಲು ಆಗುವುದಿಲ್ಲ ಎಂದರು.

## ಭಿತ್ತಿಶಿಲ್ಪ ಅಂದು–ಇಂದು–ಮುಂದು ವಿಷಯ ಕುರಿತು ಉಪನ್ಯಾಸ

**ಕಲಬುರಗಿ,ಜು.12**– ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಬೆಂಗಳೂರು ಮತ್ತು ದಿ ಆರ್ಟ ಇಂಟಿಗ್ರೇಶನ್ ಸೊಸಾಯಿಟಿಯಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಕಲಿಕಾ ಕಾರ್ಯಾಗಾರ ಜು 10 ರಿಂದ 12ರವರೆಗೆ ಹಮ್ಮಿಕೊಳ್ಳಲಾಗಿದ.ಶುಕ್ರವಾರ ದಿನದ ಕಾರ್ಯಾಗಾರದಲ್ಲಿ ಗುಬರ್ಗಾ ವಿಶ್ವವಿದ್ಯಾಲಯ ಕಲಬುರಗಿ ದೃಶ್ಯಕಲಾ ಅಧ್ಯಯನ ವಿಭಾಗ ಅಧ್ಯಾಪಕ ಡಾ ಮಲ್ಲಿಕಾರ್ಜುನ ಸಿ. ಭಾಗೋಡಿ ಅವರು ಭಿತ್ತಿಶಿಲ್ಪ ಅಂದು–ಇಂದು–ಮುಂದು ವಿಷಯ ಕುರಿತು ಉಪನ್ಯಾಸ ಸುಮಾರು ಎರಡು ತಾಸು ಭಿತ್ತಿಶಿಲ್ಪ ಇತಿಹಾಸ ಕಲೆ ಬಗ್ಗೆ ಸವಿಸ್ತಾರವಾಗಿ ಮಾಹಿತ ನೀಡಿದರು. ವಿದ್ಯಾರ್ಥಿಗಳ ಜೊತೆ ಸವಾಂದ ನಡೆಸಿದರು.ದಿ ಆರ್ಟ ಇಂಟಿಗ್ರೇಶನ್ ಚಿತ್ರಕಲಾ ಮಹಾವಿದ್ಯಾಲಯ ಪ್ರಾಚಾರ್ಯ ಎಂ ಹೆಚ್. ಬೆಳಮಗಿ ಅವರು ಅಧ್ಯಕ್ಷತೆವಹಿಸಿದ್ದರು. ಅಶೋಕ ಶಟಕಾರ ನಿರೂಪಿಸಿ ವಂದಿಸಿದರು. ಮಹಾವಿದ್ಯಾಲಯದ ಸಿಬಂದಿ ವರ್ಗದವರು ಉಪಸ್ಥಿತರಿದ್ದರು.

ಕರ್ನಾಟಕ ಶಿಲ್ಪಕಲಾ ಅಕಾಡೆಮಿ ಸಂಚಾಲಕ ಹಣಮಂತ ಡಿ. ಬಾಡದ ಹಾಗೂ ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿ ದಾನಯ್ಯ ಎಸ್ ಚೌಕಿಮಠ ಅವರು ವಿದ್ಯಾರ್ಥಿಗಳಿಗೆ ಭಿತ್ತಿ ಶಿಲ್ಪವನ್ನು ಮಾಡಿಸಿದರು

## ರಾಜ್ಯದಲ್ಲಿ ಮತ್ತೆ ಮಳೆ ಹೆಚ್ಚಾಗುವ ಮುನ್ಸೂಚನೆ

**ಬೆಂಗಳೂರು, ಜು.12**–ಹವಾಮಾನದಲ್ಲಿ ಪದೇ ಪದೇ ಉಂಟಾಗಿರುವ ಬದಲಾವಣೆಯಿಂದಾಗಿ ರಾಜ್ಯದಲ್ಲಿ ಮಳೆ ಪ್ರಮಾಣ ಹೆಚ್ಚಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಕೆಲವೆಡೆ ಹಗುರದಿಂದ ಸಾಧಾರಣ ಮಳೆಯಾಗುತ್ತಿದೆ. ಕರಾವಳಿ, ಮಲೆನಾಡು ಹಾಗೂ ಒಳನಾಡಿನ ಕೆಲವು ಕಡೆಗಳಲ್ಲಿ ಭಾಗಶಃ ವ್ಯಾಪಕ ಪ್ರಮಾಣದ ಮಳೆಯಾಗಿದೆ.

ರಾಜಧಾನಿ ಬೆಂಗಳೂರಿನಲ್ಲಿ ನಿನ್ನೆ ಮಧ್ಯಾಹ್ನ ಆರಂಭಗೊಂಡ ಮಳೆಯು ಸಂಜೆಯವರೆಗೂ ಆಗಾಗ್ಗೆ ಬರುತ್ತಿತ್ತು. ಸಂಜೆಯ ನಂತರ ಬಿಡುವು ಕೊಟ್ಟಿದ್ದ ಮಳೆ ಇಂದು ಮಧ್ಯಾಹ್ನ ಮತ್ತೆ ಜಿಟಿಜಿಟಿ ಮಳೆ ಆರಂಭಗೊಂಡು ಜನಜೀವನ ಅಸ್ತವ್ಯಸ್ತಗೊಳಿಸಿತು. ಮೋಡ ಕವಿದ ವಾತಾವರಣ ಉಂಟಾಗಿ ಬಿಟ್ಟು ಬಿಟ್ಟು ಬರುತ್ತಿದ್ದ ಹಗುರ ಮಳೆಯಿಂದ ವಾಹನ ಸವಾರರಿಗೆ ಹಾಗೂ ಜನರ ದೈನಂದಿನ ಕೆಲಸಗಳಿಗೆ ಅಡ್ಡಿಯುಂಟಾಯಿತು. ಹವಾಮಾನ ಮುನ್ಸೂಚನೆ ಪ್ರಕಾರ ನೈರುತ್ಯ ಮುಂಗಾರು ಚೇತರಿಸಿಕೊಂಡಿದ್ದು, ಮಳೆಯ ಪ್ರಮಾಣ ಹೆಚ್ಚಾಗಲಿದೆ. ಮುಂದಿನ ವಾರದಿಂದ ರಾಜ್ಯದ ಬಹುತೇಕ ಕಡೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಾಧ್ಯತೆಗಳಿವೆ. ಮತ್ತೊಂದು ಸುತ್ತಿನ ಮಳೆಯಾಗುವ ಲಕ್ಷಣಗಳಿವೆ ಎಂದು ಹವಾಮಾನ ತಜ್ಞರು ತಿಳಿಸಿದ್ದಾರೆ. ನಿರಂತರ ಮಳೆಯಾಗಿ ಅತಿವೃಷ್ಟಿ ಉಂಟಾಗಿದ್ದ ಕರಾವಳಿ ಹಾಗೂ ಮಲೆನಾಡು ಭಾಗದ ಜಿಲ್ಲೆಗಳಲ್ಲೂ ಕಳೆದ ಮೂರು ದಿನಗಳಿಂದ ಮಳೆ ಕಡಿಮೆಯಾಗಿತ್ತು. ಆದರೆ, ಸತತ ಒಣ ಹವೆಯಿಂದಾಗಿ ಮಳೆ ಕೊರತೆ ಉಂಟಾಗಿದ ರಾಜ್ಯದ ಒಳನಾಡಿನ ಹಲವೆಡೆ ನಿನ್ನೆಯಿಂದ ಹಗುರದಿಂದ ಸಾಧಾರಣ ಮಳೆಯಾಗುತ್ತಿದೆ.

# ಬಸವಸಾಗರಕ್ಕೆ ತಗ್ಗಿದ ಒಳಹರಿವು, ಕೃಷ್ಣಾ ನದಿಗೆ 46 ಕ್ಯೂಸೆಕ್ ನೀರು

**ಯುವ ಮಾರ್ಗ ಸುದ್ದಿ**

**ಲಿಂಗಸುಗೂರು,ಜು.12–** ತಾಲೂಕಿನ ಬಸವಸಾಗರ ಜಲಾಶಯಕ್ಕೆ ಹರಿದು ಬರುತ್ತಿರುವ ಹಿನ್ನೀರಿನ ಪ್ರಮಾಣ ತಗ್ಗಿದ್ದು, ಕೃಷ್ಣಾ ನದಿಗೆ ಶನಿವಾರ ಸಂಜೆ 46,256 ಕ್ಯೂಸೆಕ್ ನೀರನ್ನು ಹೊರಬಿಡಲಾಗಿದೆ.



ಕೃಷ್ಣಾ ಅಚ್ಚುಕಟ್ಟು ಪ್ರದೇಶ, ಮಹಾರಾಷ್ಟ್ರದಲ್ಲಿ ಮಳೆಯ ಪ್ರಮಾಣ ಕಡಿಮೆಯಾಗಿದೆ. ಆಲಮಟ್ಟಿ ಜಲಾಶಯದಿಂದ 60 ಸಾವಿರ ಕ್ಯೂಸೆಕ್ ನೀರು ಹರಿಸಲಾಗುತ್ತಿದೆ. ಬಸವಸಾಗರದಲ್ಲಿ ಗರಿಷ್ಠ ಪ್ರಮಾಣದ ನೀರನ್ನು ಕಾಯ್ದಿರಿಸಿಕೊಂಡು 13 ಕ್ರಸ್ಟ್‌ಗೇಟ್‌ಗಳ ಮೂಲಕ ನದಿಗೆ 40,256 ಕ್ಯೂಸೆಕ್, ಮುರುಡೇಶ್ವರ ಪವರ್ ಪ್ರಾಜೆಕ್ಟ್‌ಗೆ 6 ಸಾವಿರ ಸೇರಿ ಒಟ್ಟು 46,256 ಕ್ಯೂಸೆಕ್ ನೀರನ್ನು ಹರಿಬಿಡಲಾಗುತ್ತಿದೆ. 33.313 ಟಿಎಂಸಿ ನೀರಿನ ಸಂಗ್ರಹ ಸಾಮರ್ಥ್ಯವಿರುವ ಜಲಾಶಯದಲ್ಲಿ ಶನಿವಾರ ಸಂಜೆ 27.015 ಟಿಎಂಸಿ ನೀರು ಸಂಗ್ರಹವಾಗಿದೆ.

# 'ಕೆಕೆಆರ್‌ಡಿಬಿ ಕೃಷಿ ಆವಿಷ್ಕಾರ' ಜಲಭಾಗ್ಯ ಯೋಜನೆಗೂ ಒತ್ತು

**ಕಲಬುರಗಿ:ಜು.12–** ಕಲ್ಯಾಣ ಕರ್ನಾಟಕ ಭಾಗದ ರೈತರ ಹಿತ ಕಾಪಾಡುವ ನಿಟ್ಟಿನಲ್ಲಿ ಕೃಷಿ ಆವಿಷ್ಕಾರ ಯೋಜನೆ ಜಾರಿಗೆ ತರಲಾಗುತ್ತಿದ್ದು, ಈ ಯೋಜನೆಯಡಿ ವಿಭಾಗದ 40 ತಾಲೂಕು ಕೇಂದ್ರಗಳಲ್ಲಿ ತಲಾ ಒಂದು ಗೋದಾಮು ನಿರ್ಮಾಣಕ್ಕೆ ಯೋಜನೆ ರೂಪಿಸಲಾಗುತ್ತಿದೆ ಎಂದು ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ.ಅಜಯ ಸಿಂಗ್ ತಿಳಿಸಿದರು.



ಕೆ.ಕೆ.ಆರ್.ಡಿ.ಬಿ ಸಭಾಂಗಣದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಕೃಷಿ ಆವಿಷ್ಕಾರ ಯೋಜನೆಗಾಗಿ ರೂ.60 ಕೋಟಿ ಮೀಸಲಿಡಲಾಗುತ್ತಿದ್ದು, ಈ ಹಣ ಬಳಸಿಕೊಂಡು ತಾಲೂಕಿಗೆ ಒಂದರಂತೆ 40 ಗೋದಾಮುಗಳನ್ನು ನಿರ್ಮಿಸ ಲಾಗುತ್ತಿದೆ ಎಂದರು.

ಇದರ ಜೊತೆಗೆ, ಕೃಷಿ ಆವಿಷ್ಕಾರದ ಭಾಗವಾಗಿ ಸಣ್ಣ ನೀರಾವರಿ ಇಲಾಖೆ ವತಿಯಿಂದ ರೈತರ ಹೊಲಗಳಿಗೆ ನೀರು ಲಭಿಸುವಂತಾಗಲು ಚೆಕ್‌ಡ್ಯಾಂ, ಬದು ನಿರ್ಮಾಣ ಸೇರಿದಂತೆ ಇನ್ನಿತರ ರೈತೋಪಯೋಗಿ ಕಾರ್ಯಗಳಿಗಾಗಿ ರೂ.75 ಕೋಟಿ ಮೀಸಲಿರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ಪ್ರಸಕ್ತ ಸಾಲಿನಲ್ಲಿ ಕೆಕೆಆರ್‌ಡಿಬಿ ವತಿಯಿಂದ ಮೈಕ್ರೋ ಯೋಜನೆಯಡಿ ರೂ. 2100 ಕೋಟಿ ಹಾಗೂ ಮ್ಯಾಕ್ರೊ ಯೋಜನೆಯಡಿ ರೂ.900 ಕೋಟಿ ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ. ಇದರ ಜೊತೆಗೆ ಕಂದಾಯ ಮತ್ತು ಅರಣ್ಯ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳಿಂದ ರೂ.2000 ಕೋಟಿ ಅನುದಾನ ಸಂಗ್ರಹಿಸಿ ಒಟ್ಟು ರೂ.5000 ಕೋಟಿ ವೆಚ್ಚದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಡಾ.ಅಜಯಸಿಂಗ್ ವಿವರಿಸಿದರು.

**ಆ.4ರಂದು 34 ಹಾಸ್ಟೆಲ್‌ಗಳಿಗೆ ಅಡಿಗಲ್ಲು:**ಕೆ.ಕೆ.ಆರ್.ಡಿ.ಬಿ ವತಿಯಿಂದ 2023–24ನೇ ಅನುದಾನದಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ಪ್ರತ್ಯೇಕವಾಗಿ ಯೋಜನೆ ರೂಪಿಸಿದ್ದು, ಇದರ ಅಂಗವಾಗಿ ಕಲ್ಯಾಣ ಕರ್ನಾಟಕ ಭಾಗದ 34 ತಾಲೂಕುಗಳಲ್ಲಿ ತಾಲೂಕಿಗೆ ಒಂದರಂತೆ ರೂ.154 ಕೋಟಿ ಅಂದಾಜು ವೆಚ್ಚದಲ್ಲಿ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್‌ಗಳನ್ನು ನಿರ್ಮಿಸುವ ಕಾಮಗಾರಿಗೆ ಕೊಪ್ಪಳದಲ್ಲಿ ಆ.4ರಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅಡಿಗಲ್ಲು ನೆರವೇರಿಸಲಿದ್ದಾರೆ. ಈ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಸೇರಿದಂತೆ ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಜಿಲ್ಲೆಗಳ ಉಸ್ತುವಾರಿ ಸಚಿವರುಗಳು, ಶಾಸಕರು ಉಪಸ್ಥಿತರಿರುತ್ತಾರೆ ಎಂದು ಅಜಯಸಿಂಗ್ ಮಾಹಿತಿ ನೀಡಿದರು.

ಪ್ರಸಕ್ತ ಸಾಲಿನ ರೂ.5000 ಕೋಟಿ ಅನುದಾನ ಬಳಸಿಕೊಂಡು ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾ ರಿಗಳಿಗೆ ಕ್ರಿಯಾ ಯೋಜನೆ ರೂಪಿಸಿ ಅನುಮೋದನೆ ನೀಡುವಂತೆ ಕೋರಿ ಇತ್ತೀಚೆಗೆ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗಿದೆ. ರಾಜ್ಯ ಯೋಜನಾ ಮತ್ತು ಸಾಂಖ್ಯಿಕ ಇಲಾಖೆಯ ಸಚಿವ ಡಿ.ಸುಧಾಕರ ಸಹ ಈ ವೇಳೆ ಜೊತೆಗಿದ್ದರು. ಈ ತಿಂಗಳಾಂತ್ಯದೊಳಗೆ ರಾಜ್ಯಪಾಲರಿಂದ ಅನುಮೋದನೆ ಲಭಿಸುವ ಸಾಧ್ಯತೆಯಿದೆ ಎಂದು ಡಾ. ಸಿಂಗ್ ವಿಶ್ವಾಸ ವ್ಯಕ್ತಪಡಿಸಿ ದರು.

2022–23ನೇ ಸಾಲಿನಲ್ಲಿ ರೂ.2000 ಕೋಟಿ ಹಾಗೂ 2023–24ನೇ ಸಾಲಿನಲ್ಲಿ ರೂ.1900 ಕೋಟಿ ಖರ್ಚು ಮಾಡುವ ಮೂಲಕ ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ರೂ.5000 ಕೋಟಿ ಸಂಪೂರ್ಣ ಅನುದಾನ ಖರ್ಚು ಮಾಡುವ ಮೂಲಕ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗುವುದು ಎಂ ದು ನುಡಿದರು.

# 1.25 ಲಕ್ಷ ಕೋಟಿ ರೂ. ಮೀರಿದ ಭಾರತದ ರಕ್ಷಣಾ ಉತ್ಪಾದನೆ : ಪ್ರಧಾನಿ ಮೋದಿ

**ನವದೆಹಲಿ,ಜು.12–** ಭಾರತದ ರಕ್ಷಣಾ ಉತ್ಪಾದನೆಯು 1.25 ಲಕ್ಷ ಕೋಟಿ ರೂ. ಮೀರಿದ್ದು, ಇಂದು ನಾವು ಹೊಸ ದಾಖಲೆಗಳನ್ನು ನಿರ್ಮಿಸುತ್ತಿದ್ದೇವೆ ಎಂದು ಪ್ರಧಾನಿ ನರೇಂ ದ್ರಮೋದಿ ಹೇಳಿದ್ದಾರೆ, 16ನೇ ರೋಜ್‌ಗಾರ್ ಮೇಳದಲ್ಲಿ ಯುವಜನತೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹಿಂದೆ ಭಾರತದಲ್ಲಿ ಎರಡರಿಂದ ನಾಲ್ಕು ಮೊಬೈಲ್ ಉತ್ಪಾದನಾ ಘಟಕಗಳು ಮಾತ್ರ ಇದ್ದವು. ಈಗ ಮೊಬೈಲ್ ಫೋನ್ ತಯಾರಿಕೆಗೆ ಸಂಬಂಧಿಸಿದ 300 ಘಟಕಗಳಿವೆ. ಲಕ್ಷಾಂತರ ಯುವಜನರಿಗೆ ಉದ್ಯೋಗ ನೀಡಿದ್ದೇವೆ ಎಂದರು.



ಅದೇ ರೀತಿ ಆಪರೇಷನ್ ಸಿಂಧೂರ್ ನಂತರ ವ್ಯಾಪಕವಾಗಿ ಹೆಮ್ಮೆಯಿಂದ ಚರ್ಚಿಸಲಾದ ಮತ್ತೊಂದು ವಲಯವೆಂದರೆ ಅದು ರಕ್ಷಣಾ ವಲಯ. ರಕ್ಷಣಾ ಉತ್ಪಾದನೆಯಲ್ಲೂ ಭಾರತ ಹೊಸ ದಾಖಲೆಗಳನ್ನು ಸ್ಥಾಪಿಸುತ್ತಿದೆ. ನಮ ರಕ್ಷಣಾ ಉತ್ಪಾದನೆಯು 1.25 ಲಕ್ಷ ಕೋಟಿ ರೂ.ಗಳನ್ನು ಮೀರಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಭಾರತದ ಯುವಕರು ದೇಶದ ಅತಿದೊಡ್ಡ ಆಸ್ತಿ ಮತ್ತು ಉಜ್ವಲ ಭವಿಷ್ಯದ ಬಲವಾದ ಭರವಸೆಯಿದೆ. ಇಂದು ಭಾರತವು ಎರಡು ಅಪರಿಮಿತ ಶಕ್ತಿಗಳನ್ನು ಹೊಂದಿದೆ ಎಂದು ಜಗತ್ತು ಒಪ್ಪಿಕೊಂಡಿದೆ. ಮೊದಲನೆಯದಾಗಿ, ಜನಸಂಖ್ಯಾಶಾಸ್ತ್ರ ಮತ್ತು ಎರಡನೆಯದಾಗಿ, ಪ್ರಜಾಪ್ರಭುತ್ವ. ಈ ಯುವಶಕ್ತಿಯು ಭಾರತದ ಉಜ್ವಲ ಭವಿಷ್ಯದ ದೊಡ್ಡ ಆಸ್ತಿ ಮತ್ತು ದೊಡ್ಡ ಖಾತರಿಯಾಗಿದೆ ಎಂದು ಬಣ್ಣಿಸಿದರು.ನಮ ಸರ್ಕಾರವು ಈ ಆಸ್ತಿಯನ್ನು ಸಮೃದ್ಧಿಯ ಸೂತ್ರವನ್ನಾಗಿ ಮಾಡುವಲ್ಲಿ ಅವಿಶ್ರಾಂತವಾಗಿ ತೊಡಗಿಸಿಕೊಂಡಿದೆ. ನಾನು ಐದು ದೇಶಗಳ ಭೇಟಿಯಿಂದ ಹಿಂದಿರುಗಿದೆ. ಪ್ರತಿ ದೇಶದಲ್ಲೂ ಭಾರತದ ಯುವ ಶಕ್ತಿಯ ಪ್ರತಿಧ್ವನಿ ಕೇಳಿಬಂತು. ಈ ಸಮಯದಲ್ಲಿ, ಮಾಡಿಕೊಂಡ ಎಲ್ಲಾ ಒಪ್ಪಂದಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತದ ಯುವಕರಿಗೆ ಖಂಡಿತವಾಗಿಯೂ ಪ್ರಯೋಜನ ನೀಡುತ್ತವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಖಾಸಗಿ ವಲಯದಲ್ಲಿ ಹೊಸ ಉದ್ಯೋಗಾವಕಾಶಗಳನ್ನು ಸೃಷ್ಟಿಸುವತ್ತ ತಮ ಸರ್ಕಾರ ಗಮನಹರಿಸಿದೆ. ಉದ್ಯೋಗ ಸಂಬಂಧಿತ ಪ್ರೋತ್ಸಾಹಕ ಯೋಜನೆ ಎಂಬ ಹೊಸ ಯೋಜನೆಯನ್ನು ಅನುಮೋದಿಸಲಾಗಿದೆ. ಈ ಯೋಜನೆಯಡಿ ಖಾಸಗಿ ವಲಯದಲ್ಲಿ ತಮ ಮೊದಲ ಉದ್ಯೋಗವನ್ನು ಪಡೆಯುವ ಯುವಕರಿಗೆ ಸರ್ಕಾರ 15,000 ರೂ.ಗಳನ್ನು ನೀಡುತ್ತದೆ ಎಂದರು.

ಉದ್ಯೋಗ ಆಧಾರಿತ ಪ್ರೋತ್ಸಾಹಕ ಯೋಜನೆಗಾಗಿ ಕೇಂದ್ರ ಸರ್ಕಾರ ಸುಮಾರು 1 ಲಕ್ಷ ಕೋಟಿ ರೂ.ಗಳನ್ನು ಬಜೆಟ್‌ನಲ್ಲಿ ನಿಗದಿಪಡಿಸಿದೆ. ಇದು ಸುಮಾರು 3.5 ಕೋಟಿ ಉದ್ಯೊ?ಗಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತದೆ ಎಂದು ನಿರೀಕ್ಷಿಸಲಾಗಿದೆ ಎಂದು ತಿಳಿಸಿದರು.ಇದೇ ವೇಳೆ ವಿವಿಧ ಸರ್ಕಾರಿ ಇಲಾಖೆಗಳು ಮತ್ತು ಸಂಸ್ಥೆಗಳಲ್ಲಿ ಹೊಸದಾಗಿ ನೇಮಕಗೊಂಡ 51,000ಕ್ಕೂ ಹೆಚ್ಚು ಯುವಕರಿಗೆ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ನೇಮಕಾತಿ ಪತ್ರಗಳನ್ನು ಪ್ರಧಾನಿ ವಿತರಿಸಿದರು.

# ಮಾನ್ವಿ : ಲೋಕ ಅದಾಲತ್ 2 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಇತ್ಯರ್ಥ.

**ಯುವ ಮಾರ್ಗ ಸುದ್ದಿ**



**ಮಾನ್ವಿ,ಜು.12–** ಪಟ್ಟಣದ ಸಿವಿಲ್ ಮತ್ತು ಜೆ. ಎಂ.ಎಫ್.ಸಿ. ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್ ಕಾರ್ಯಕ್ರಮದಲ್ಲಿ 2 ಸಾವಿರಕ್ಕೂ ಹೆಚ್ಚು ರಾಜಿಯಾಗಬಲ್ಲ ವಿವಿಧ ಮೊಕದ್ದಮೆಗಳನ್ನು ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರಾದ ಶಿವರಾಜ್. ವಿ. ಸಿದ್ದೇಶ್ವರ್ ಮತ್ತು ಸಿವಿಲ್ ನ್ಯಾಯಾಧೀಶರಾದ ಆನಂದ ಹೆಚ್. ಕೊಣ್ಣೂರು ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸಿದರು.

ಮಾನ್ವಿ ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್ ನಲ್ಲಿ ಅನೇಕ ಪ್ರಕರಣಗಳನ್ನು ಕಕ್ಷಿದಾರ ಸಮ್ಮುಖದಲ್ಲಿ ರಾಜಿ ಸಂದಾನ ಮಾಡಿದರು.ಹಿರಿಯ ಶ್ರೇಣಿ ಸಿವಿಲ್ ಮತ್ತು ಜೆ.ಎ..ಎಪ್.ಸಿ ನ್ಯಾಯಾಲಯದ ನ್ಯಾಯಾಧೀಶರಾದ ಶಿವರಾಜ ವಿ.ಸಿದ್ದೇಶ್ವರ 593 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಗೊಳಿಸಿದರು,ಮತ್ತು ಸಿವಿಲ್ ಮತ್ತು ಜೆ.ಎಂ.ಎಪ್.ಸಿ. ನ್ಯಾಯಾಲಯದ ನ್ಯಾಯಾಧೀಶರಾದ ಆನಂದ ಹೆಚ್. ಕೊಣ್ಣೂರು 1525 ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥ ಪಡಿಸಿದರು. ಜೀವನಾಂಶಕ್ಕಾಗಿ ಅರ್ಜಿ ಸ ಲ್ಲಿಸಿ ಅನೇಕ ವರ್ಷಗಳಿಂದ ದೂರವಿದ್ದ ದಂಪತಿಗಳನ್ನು ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಆನಂದ ಹೆಚ್.ಕೊಣ್ಣೂರ ಪರಸ್ಪರ ತಿಳಿಸಿ ಹೇಳುವ ಮೂಲಕ ರಾಜಿ ಸಂಧಾನ ಮಾಡಿಸಿದ್ದು ವಿಶೇಷವಾಗಿತ್ತು , ದಂಪತಿಗಳು ಅನೇಕ ವರ್ಷಗಳಿಂದ ದೂರ ವಿದ್ದು ಜೀವನಾಂಶಕ್ಕಾಗಿ ನ್ಯಾಯಾಲಯದಲ್ಲಿ ವಕೀಲರ ಮೂಲಕ ಅರ್ಜಿ ಸಲ್ಲಿಸಿದರು ಅವರಿಗೆ ಕೂಡಿ ಬಾಳುವಂತೆ ತಿಳಿ ಹೇಳಿದ ನಂತರ ಇಂದು ನಡೆದ ಲೋಕದಲತ್ ನಲ್ಲಿ ಪರಸ್ಪರ ಒಪ್ಪಿ ಪುನಃ ದಾಂಪತ್ಯ ಜೀವನ ನಡೆಸುವುದಾಗಿ ರಾಜಿಯಾಗಿದ್ದರಿಂದ ನ್ಯಾಯಾಲಯದಲ್ಲಿ ಪರಸ್ಪರ ಹೂ ಮಾಲೆ ಬದಲಾಯಿಸಿಕೊಂಡು ಸಿಹಿ ಹಂಚಿ ದಂಪತಿಗಳು ಒಂದಾಗಿ ನಡೆದಿದ್ದು ನ್ಯಾಯಾಲಯದಲ್ಲಿ ಖುಷಿಯ ವಾತಾವರಣ ಮೂಡಿಸಿತು.

ಈ ಸಂದರ್ಭದಲ್ಲಿ ವಕೀಲರ ಸಂಘದ ಅಧ್ಯಕ್ಷರಾದ ರವಿಕುಮಾರ್ ಪಾಟೀಲ್, ಪ್ರಧಾನ ಕಾರ್ಯದರ್ಶಿ ಚನ್ನಬಸವ ನಾಯಕ ಬಲ್ಲಟಗಿ,ಉ ಪಾಧ್ಯಕ್ಷರಾದ ಮನೋಹರ ವಿಶ್ವಕರ್ಮ,ಕೊರವಯ್ಯ ನಾ ಯಕ, ಖಜಾಂಚಿ ದತ್ತಾತ್ರೇಯ ಕೊಟ್ನೇಕಲ್,ಜಂಟಿ ಕಾರ್ಯದರ್ಶಿಗಳಾದ ಈಶಪ್ಪ ಬೈಲ್ ಮರ್ಚೆಡ್, ಮಲ್ಲೇಶ ಮಾಚನೂರು, ಹಿರಿಯ ನ್ಯಾಯವಾದಿಗಳಾದ ಗುಮ್ಮ ಬಸವರಾಜ,ಬಿ. ಕೆ.ಅಮ ರೇಶಪ್ಪ, ಹನುಮಂತಪ್ಪ ಮು ಷ್ಟೂರು, ರಾಜಾ ಶ್ಯಾಮ ಸುಂ ದರ ನಾಯಕ, ಲಕ್ಷ್ಮೀದೇವಿ ನಾಯಕ, ಸೆಟ್ಯಾಲ್ಲಾ ಸರ್ಲೆಟ್, ಶಿವಶರಣಪ್ಪ, ಮಲ್ಲಿಕಾರ್ಜುನ ಮೇಟಿ, ಯಲ್ಲಪ್ಪ ಹಿರೇಬಾದ ರದಿನ್ನಿ, ಹನುಮಂಯ್ಯ ರಂಗದಾಳ,ಹನುಮಂತರಾಯ ಕಪಗಲ್, ಮೌನೇಶ ರಾಠೋಡ್, ನಾಗರಾಜ ಭಂಡಾರಿ,ಯಲ್ಲಪ್ಪ ನಾಯಕ ಮುಷ್ಟೂರು, ರಾಘವೇಂದ್ರ ಜಾನೇಕಲ್, ಶ್ರೀನಿವಾಸ ನಂದಿಹಾಳ, ಚಂದ್ರಶೇಖರ ಬೈಲ್ ಮರ್ಚೆಡ್, ,ವಿರೂಪಾಕ್ಷಿ ಮುಷ್ಟೂರು, ಬಸವರಾಜ ದೇವಿಪುರ, ಚಂದ್ರಶೇಖರ ನಾಯ್ಕ್ , ಗೂಗಲ್ ನಾಗರಾಜ, ಸೇರಿದಂತೆ ಹಿರಿಯ ವಕೀಲರು ಮಹಿಳಾ ವಕೀಲರು ಸೇರಿದಂತೆ ಇತರರು ಇದ್ದರು

# ಶಕ್ತಿ ಯೋಜನೆಯಡಿ 500 ಕೋಟಿ ಟ್ರಿಪ್

**ಯುವ ಮಾರ್ಗ ಸುದ್ದಿ**

**ರಾಯಚೂರು,ಜು.12–** ರಾಜ್ಯ ಸರ್ಕಾರದ ಜನಪರ ಮತ್ತು ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದ್ದು, ಈ ಯೋಜನೆ ಗಳ ಪೈಕಿ ಶಕ್ತಿ ಯೋಜನೆಯಡಿ ಫಲಾನುಭವಿಗಳ ಸಂಖ್ಯೆ 500 ಕೋಟಿ ಟ್ರಿಪ್‌ಗಳ ಗಡಿ ದಾಟ್ಟುವ ಮೂಲಕ ಹೆಣ್ಣು ಮಕ್ಕಳಿಗೆ ಉಚಿತವಾಗಿ ಪ್ರಯಾಣಿಸುವ ಸೌಲಭ್ಯವನ್ನು ಕಲ್ಪಿಸಲಾಗಿದೆ.

ಯೋಜನೆಯನ್ನು ಪ್ರಥಮ ಬಾರಿಗೆ 2023 ರ ಜೂನ್ 11ರಂದು ಜಾರಿಗೊಳಿಸಲಾಗಿದೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಉಚಿತವಾಗಿ ರಾಜ್ಯದ ಎಲ್ಲಾ ಮಹಿಳೆಯರು, ವಿದ್ಯಾರ್ಥಿನಿಯರು ಮತ್ತು ಅಂಗತ್ವಾಲ್ಪಸಂಖ್ಯಾತರು ಸೇರಿದಂತೆ ಉಚಿತವಾಗಿ ಪ್ರಯಾಣಿಸುವ ಸೌಲಭ್ಯವನ್ನು ಒದಗಿಸಿಸಲಾಗಿದೆ.

ಹೆಣ್ಣು ಮಕ್ಕಳು ಸರ್ಕಾರಿ ಸೌಮ್ಯದ ಬಸ್ಸಗಳಲ್ಲಿ ಉಚಿತವಾಗಿ ಪ್ರಯಾಣಿಸುವ ಹೆಗ್ಗಳಿಕೆಯನ್ನು ಸಾಂಕೇತಿಕವಾಗಿ ಜುಲೈ 14ರ ಸೋಮವಾರ ರಂದು ಸನ್ಮಾನ್ಯ ಮುಖ್ಯ ಮಂತ್ರಿಗಳು ಬಸ್‌ನಲ್ಲಿ ಪ್ರಯಾಣಿಸುವ ಮೂಲಕ ಸಮಿತಿಯ ಸದಸ್ಯರುಗಳು ಈ ಸುಸಂದರ್ಭದವನ್ನು ಕಲಬುರಗಿ ವಲ ಯದ ಎಲ್ಲಾ ಜಿಲ್ಲೆಗಳಲ್ಲಿ ಪೂಜೆಯನ್ನು ಸಲ್ಲಿಸಿ, ಪ್ರಯಾಣಿಕರಿಗೆ ಸಿಹಿ ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಗುತ್ತಿದ್ದು, ರಾಯಚೂರು ವಿಭಾಗದ ವ್ಯಾಪ್ತಿಯಲ್ಲಿ ಬರುವ ರಾಯಚೂರು, ಲಿಂಗಸುಗೂರು, ಸಿಂಧನೂರು, ಮಾನವಿ, ದೇವದುರ್ಗ, ಮಸ್ಕಿ, ಅರಕೇರಾ, ಸಿರವಾರ ಬಸ್ ನಿಲ್ದಾಣಗಳಲ್ಲಿ ಅಂದು ಬೆಳಿಗ್ಗೆ 11:30 ಗಂಟೆಗೆ ಈ ಸಮಾರಂಭದ ಪೂಜೆಯುನ್ನು ಆಯೋಜಿಸಲಾಗಿದೆ.

ಈ ಸಮಾರಂಭದಲ್ಲಿ ಕೇಂದ್ರ ಬಸ್ ನಿ ಲ್ದಾಣ ರಾಯಚೂರುನಲ್ಲಿ ಗ್ಯಾರಂಟಿ ಯೋಜನೆಗಳ ಮಾನ್ಯ ಜಿಲ್ಲಾಧ್ಯಕ್ಷರು, ಜಿಲ್ಲಾ ಉಪಾಧ್ಯಕ್ಷರು. ಸದಸ್ಯರು ಮತ್ತು ತಾಲೂಕು ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಭಾಗವಹಿಸಲಿದ್ದು, ಹಾಗೂ ತಾಲೂಕುವಾರು ಬಸ್ ನಿಲ್ದಾಣದಲ್ಲಿ ಗ್ಯಾರಂಟಿ ಯೋಜನೆಗಳ ತಾಲೂಕ ಅಧ್ಯಕ್ಷರು, ಉಪಾಧ್ಯಕ್ಷರು. ಸದಸ್ಯರುಗಳು ಭಾಗವಹಿಸಲಿದ್ದಾರೆ ಎಂ ದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ರಾಯಚೂರು ವಿಭಾಗೀಯ ನಿ ಯಂತ್ರಣಾಧಿಕಾರಿಗಳಾದ ಚಂದ್ರಶೇಖರ ಎಲ್.ಎಮ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಚಿವರ ಮೌಲ್ಯ ಮಾಪನಕ್ಕೆ ಮುಂದಾದ ವರಿಷ್ಠರು, ನಿಲ್ಲದ ಕಾಂಗ್ರೆಸ್ಸಿಗರ ರಗಳೆ

**ಬೆಂಗಳೂರು,ಜು.12–** ಶಾಸಕರುಗಳ ಜೊತೆ ಪ್ರತ್ಯೇಕವಾಗಿ ಒಟ್ಟು 6 ದಿನಗಳ ಕಾಲ ಅಭಿಪ್ರಾಯ ಸಂಗ್ರಹಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಇದೇ ತಿಂಗಳ 16 ರಂದು ಸಚಿವರ ಜೊತೆ ಚರ್ಚೆ ನಡೆಸುವ ಮೂಲಕ ಮೌಲ್ಯಮಾಪನಕ್ಕೆ ಮುಂದಾಗಿದ್ದಾರೆ.



ಸುರ್ಜೇವಾಲ ಅವರ ಕಾರ್ಯವೈಖರಿಗೆ ಕಾಂಗ್ರೆಸ್ ಪಕ್ಷದಲ್ಲಿ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ. ರಾಜ್ಯದಲ್ಲಿ ಸಿದ್ದರಾಮಯ್ಯ ಪ್ರಭಾವಿ ನಾಯಕರಾಗಿದ್ದು, ಅವರನ್ನೂ ದೂರ ಇಟ್ಟು ಸುರ್ಜೇವಾಲ ನೇರವಾಗಿ ಕಾಂಗ್ರೆಸ್ ಶಾಸಕರ ಜೊತೆ ಅಭಿಪ್ರಾಯ ಸಂಗ್ರಹಿಸಿದ್ದು, ತೀವ್ರ ಚರ್ಚೆಗೆ ಗ್ರಾಸವಾಗಿದೆ. ಶಾಸಕರಿಗೆ ತಮ ಅಹವಾಲು ಹೇಳಿಕೊಳ್ಳಲು ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳು ಸುಲಭವಾಗಿ ಲಭ್ಯವಿದ್ದರು. ಅದರ ಹೊರತಾಗಿ ಸುರ್ಜೇವಾಲ ಸಭೆ ನಡೆಸಿದ್ದೇಕೆ?, ಇದು ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಅನುಪಸ್ಥಿತಿಯನ್ನು ಪ್ರಸ್ತಾಪಿಸಿದಂತಾಯಿತಲ್ಲವೇ? ಎಂಬ ಟೀಕೆಗಳು ಕೇಳಿಬಂದಿವೆ.

ಶಾಸಕರ ಜೊತೆ ಚರ್ಚೆ ನಡೆಸಿದ್ದಕ್ಕಷ್ಟೆ? ಸೀಮಿತವಾಗದೆ ಸುರ್ಜೇವಾಲ ಈಗ ಸಚಿವರ ಜೊತೆ ಪ್ರತ್ಯೆ?ಕ ಸಮಾಲೋಚನೆಯಲ್ಲಿ ಮುಂದಾಗಿರುವುದು ಮತ್ತಷ್ಟು ಚರ್ಚೆಗೆ ಗ್ರಾಸವಾಗಿದೆ. ಶಾಸಕರ ಜೊತೆ ಚರ್ಚೆಯ ವೇಳೆ ಕ್ಷೆ?ತ್ರದಲ್ಲಿ ಏನೆಲ್ಲಾ ಅಭಿವೃದ್ಧಿ ಮಾಡಿದ್ದೀರ, ಇನ್ನೂ ಯಾವ ರೀತಿ ಅಭಿವೃದ್ಧಿಯಾಗಬೇಕು?, ಸಚಿವರು ಶಾಸಕರಿಗೆ ಯಾವ ರೀತಿ ಸ್ಪಂದಿಸುತ್ತಿದ್ದಾರೆ ಎಂಬ ಪ್ರಶ್ನೆಗಳನ್ನು ಮುಂದಿಟ್ಟಿದ್ದರು. ಈಗ ಸಚಿವರಿಗೆ ಇಲಾಖೆಗಳಿಗೆ ಸಂಬಂಧಪಟ್ಟ ಪ್ರಶ್ನೆಗಳ ನಮೂನೆಗಳನ್ನು ಈಗಾಗಲೇ ರವಾನಿಸಲಾಗಿದೆ ಎಂದು ತಿಳಿದುಬಂದಿದೆ. ಮೊದಲ ಮತ್ತು ಎರಡನೇ ಹಂತದಲ್ಲಿ ತಲಾ ಮೂರು ದಿನ ಶಾಸಕರ ಜೊತೆ ಪ್ರತ್ಯೆಕ ಸಭೆ ನಡೆಸಿದಾಗ ಕೆಲ ಸಚಿವರು ತಮಗೂ ಸಮಯ ನೀಡುವಂತೆ ಸುರ್ಜೇವಾಲ ಅವರ ಬಳಿ ಮನವಿ ಮಾಡಿಕೊಂಡಿದ್ದರು.

ಆದರೆ ಸಚಿವರಿಗೆ ಸಮಯ ನೀಡದ ಸುರ್ಜೇವಾಲ, ಮುಂದಿನ ವಾರ ನಿಮ ಜೊತೆ ಪ್ರತ್ಯೆಕ ಸಭೆ ನಡೆಸುವುದಾಗಿ ಹೇಳಿದ್ದರು. ಅದರಂತೆ ಈಗ ಸಮಯ ನಿಗದಿಯಾಗಿದ್ದು, ಬಹುತೇಕ ಸಚಿವರಿಗೆ ಪ್ರಶ್ನೆಗಳ ನಮೂನೆಗಳನ್ನು ರವಾನಿಸಲಾಗಿದೆ.ಇಲಾಖಾವಾರು ಕೈಗೊಂಡಿರುವ ಅಭಿವೃದ್ಧಿ ಕೆಲಸಗಳು, ಹೊಸ ಯೋಜನೆಗಳು, ಪ್ರಗತಿ ಪರಿಶೀಲನೆ, ಕೆಡಿಪಿ ಸಭೆ, ದಿಶಾ ಸಭೆ ಹಾಗೂ ಪಕ್ಷದ ಸಂಘಟನೆಗೆ ಸಚಿವರ ಕೊಡುಗೆಗಳ ಬಗ್ಗೆ ಮಾಹಿತಿ ನೀಡುವಂತೆ ಸೂಚನೆ ನೀಡಲಾಗಿದೆ. ಬೆಂಗಳೂರಿಗೆ ಆಗಮಿಸುವ ಸುರ್ಜೇವಾಲ ಅವರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚರ್ಚೆ ಮಾಡಿ ನಿಗಮ ಮಂಡಳಿಗಳ ನೇಮಕಾತಿ ವಿಧಾನಪರಿಷತ್ ಸದಸ್ಯರ ನಾಲ್ಕು ಸ್ಥಾನಗಳಿಗೆ ಅಂತಿಮ ಪಟ್ಟಿಯನ್ನು ಅಖೈರುಗೊಳಿಸುವ ಸಾಧ್ಯತೆಯಿದೆ.

ಈ ನಡುವೆ ಕೆಲ ಸಚಿವರಿಗೆ ಬುಲಾವ್ ನೀಡಿದ್ದು, ಪ್ರಗತಿ ಪರಿಶೀಲನೆಗೆ ಸುರ್ಜೇವಾಲ ಮುಂದಾಗಿದ್ದಾರೆ. ಸಚಿವರ ಜೊತೆ ಸುರ್ಜೇವಾಲ ಸಭೆ ಸಾಕಷ್ಟು ಕುತೂಹಲ ಕೆರಳಿಸಿದೆ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಯವರೇ ಈ ಬಗ್ಗೆ ಕಾಲಕಾಲಕ್ಕೆ ಸಭೆ ನಡೆಸುತ್ತಿದ್ದಾರೆ. ಹೀಗಿರುವಾಗ ಸುರ್ಜೇವಾಲ ಯಾವ ಕಾರಣಕ್ಕೆ ಸಚಿವರ ಪ್ರಗತಿ ಪರಿಶೀಲನೆ ಮಾಡುತ್ತಾರೆ ಎಂದು ಪ್ರಶ್ನೆಗಳು ಉದ್ಭವಿಸಿವೆ.

ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರ ಹುದ್ದೆ ಕುರಿತು ತೀವ್ರ ಚರ್ಚೆ ನಡೆಯುತ್ತಿರುವುದಕ್ಕೆ ಸುರ್ಜೇವಾಲ, ಶಾಸಕರು, ಸಚಿವರು ಸೇರಿದಂತೆ ವಿವಿಧ ಹಂತಗಳಲ್ಲಿ ಅಭಿಪ್ರಾಯ ತಿಳಿಸುತ್ತಿರುವುದು ರಾಜಕೀಯದಲ್ಲಿ ಮಹತ್ವದ ಬದಲಾವಣೆಯ ಮುನ್ಸೂಚನೆ ನೀಡಿದೆ.

Owned, Printed and published by ANILKUMAR H from Plot No. # 3-5-415/-A MANVI Pooja Rice Mill, Near Kataraki Road, Manvi Tq. Manvi, Dist, Raichur-584123, Printed at MAA FRIENDS PRINTING PRESS, Plot No. # 3-5-415/-A Pooja Rice Mill Near Kataraki Road, Manvi Tq. Manvi, Dist: Raichur-584123, State: Karnataka Editor: ANILKUMAR H